**A Circumnavigation to the world of Dance and Performing Arts : A complete Journal**

ನೂಪುರ ಭ್ರಮರಿ

ಸಂಪಾದಕರು : ಮನೋರಮಾ ಬಿ.ಎನ್.
ಪ್ರಸರಣಾಧಿಕಾರಿ : ವಿಷ್ಣುಪ್ರಸಾದ್ ನಿಡ್ಡಾಜೆ
ಕಛೇರಿ ನಿರ್ವಹಣೆ : ನಾರಾಯಣ ಭಟ್ ಬಿ.ಜಿ
ನೆರವು : ಸಾವಿತ್ರಿ ಭಟ್ ಮತ್ತು ಸನ್ಮಿತ್ರರು
ಪ್ರಕಾಶನ : ಶ್ರೀ ಸಾನ್ನಿಧ್ಯ ಪ್ರಕಾಶನ (ರಿ.), ಮಡಿಕೇರಿ

**RNI No :KARKAN/2009/29752**

**ಮಾರ್ಗಶಿರ–ಪುಷ್ಯ 2012**

**ಸಂಪುಟ : 6 ಸಂಚಿಕೆ : 6**

ಆವರಣ ಪುಟ : ಸುನೀಲ್ ಕುಲಕರ್ಣಿ,
ಅಕ್ಷರೋದ್ಯಮ, ಮಂಗಳೂರು
ಪುಟವಿನ್ಯಾಸ ಮತ್ತು ಮುದ್ರಣ :
ಲಾವಣ್ಯ ಪ್ರಿಂಟರ್ಸ್, ಬೆಂಗಳೂರು

## ಅಂತರಂಗ.....

## ಹೇಮಂತಋತುಗಾನ


- ಮಂಜೀರ ....2
- ಲಲಿತಲಹರಿ : ಪದ್ಯಪಾನ....4
- ದರ್ಶನ ಭ್ರಮರಿ: ದೇವರನಾಮ ನೃತ್ಯಸಂಯೋಜನೆಯ ಒಡತಿ : ರೇವತಿ ನರಸಿಂಹನ್....5
- ಲಲಿತ ಲಹರಿ : ಶೃಂಗಾರ (ಅಷ್ಟ)ನಾಯಕರ ಚಿತ್ತವೃತ್ತಿ....8
- ದೀವಟಿಗೆ : ಎರಡು ಪುಸ್ತಕ ವಿಮರ್ಶೆಗಳು....10

  ಪ್ರತಿರಾಗ ರಸೋದಯದ ಶತಮಾನದ ಸಂಗೀತ ....12
- ಹಸ್ತ ಮಯೂರಿ : ಶಿವಲಿಂಗಹಸ್ತ....16
- ನಿಮ್ಮ ಬರೆಹ ನಮ್ಮ ಓದು ....16
- ದರ್ಪಣ : ನೃತ್ಯ ರಂಗದ ರಾಣಿ : ರುಕ್ಮಿಣಿ (ಭಾಗ–17)....17
- ನೃತ್ಯ ಸಂಶೋಧನಾ ಸಮ್ಮೇಳನ – 2013ಕ್ಕೆ ಆತ್ಮೀಯ ಆಹ್ವಾನ....23


All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their own,not of Noopura Bhramari.

Visit our website : **www.noopurabhramari.com**
for the latest news, views and other updates.

ನೂಪುರ ಭ್ರಮರಿಗೆ ಲೇಖನ–ವಿವರ–ವಿಚಾರ–ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು
ಪ್ರತೀ ಎರಡನೇ ತಿಂಗಳ 1ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.




**...ಈ** ವರ್ಷದ ಅಂತ್ಯದ 2 ತಿಂಗಳಿನ ಸಂಭ್ರಮ ಹೇಳತೀರದು. ಹೇಳಿದಷ್ಟೂ ಕಡಿಮೆಯೆನಿಸುವ, ಹೇಳಹೊರಟರೆ ಮತ್ತಷ್ಟು ಹೇಳುವಂತೆ ಮಾಡುವ, ಭಾಗವಹಿಸಿದ್ದಕ್ಕೆ ಕೃತಾರ್ಥರಾದ ಧನ್ಯತೆ, ಸ್ನೇಹಪರತೆ, ನಿಸ್ಪೃಹತೆ, ಕಣ್ತುಂಬಿಕೊಂಡು ಆಸ್ವಾದಿಸಿದ ಅನನ್ಯತೆಯನ್ನು ಬಹುಷಃ ಈ ಮೊದಲು ಯಾವ ಕಾರ್ಯಕ್ರಮವೂ ಅಷ್ಟೇಕೆ ನಮ್ಮಗಳ ಕೌಟುಂಬಿಕ ಸಾಂಸ್ಥಿಕ ಸಂದರ್ಭಗಳೂ ಕೊಟ್ಟಿರಲಾರದೇನೋ ! ಪದವಿ/ಪುರಸ್ಕಾರ/ಲಾಭ/ಬಿಂಕ–ಬಿನ್ನಾಣಗಳು ದಾಟಿ, ವೈಯಕ್ತಿಕ ಸ್ವಾರ್ಥ–ಸಂತೋಷಗಳು ಕರಗಿ, ಸಿನಿಕತೆಯ ಪರದೆ ಹರಿದು 'ಸಹೃದಯ' ಸಂಸ್ಕಾರ ಆ ಮೂರು ದಿನಗಳಲ್ಲೂ ಮನೆಮಾಡಿತ್ತೆಂದರೆ ಆ ಕಾರ್ಯಕಾರಣ ಶಕ್ತಿ ಎಷ್ಟೊಂದು ಹಿರಿದು ಎಂಬುದು ಅನುಭವಕ್ಕೇ ಬರುತ್ತದೆ.

ಅಷ್ಟಕ್ಕೂ ಕರ್ನಾಟಕದ ಇತಿಹಾಸದಲ್ಲೇ ಪ್ರಪ್ರಥಮವೆಂಬಂತೆ ತುಂಬುಗನ್ನಡದಲ್ಲಿ ನಡೆದು ಇತಿಹಾಸದಲ್ಲಿ ದಾಖಲಾಗಿಹೋದ ಡಾ. ರಾ.ಗಣೇಶರ ಶತಾವಧಾನದ ಗುಂಗಿನಿಂದ ಹೊರಬರುವುದೆಂದರೆ ಅದೇನು ಸಾಮಾನ್ಯಮಾತೇ? ಹಾಗಾಗಿ ಅವಧಾನ ಕಳೆದು ದಿನಗಳುರುಳಿದರೂ ಅದರ ಸುಗಂಧ ಸಚ್ಚಿದಾನಂದ ಸ್ವರೂಪದ 'ಆನಂದ'ದಲ್ಲಿ ವರ್ಧಿಸುತ್ತಲೇ ಇದೆ. ಶತಾವಧಾನ ಕೇವಲ ಅವಧಾನಿಗಳಿಗೆ, ಪೃಚ್ಛಕರಿಗೆ, ವಿದ್ವಾಂಸರಿಗೆ ಮಾತ್ರ ಮೀಸಲಾಗದೆ ಪ್ರೇಕ್ಷಕ ಸಹೃದಯರಲ್ಲೂ ಅವಧಾನಶೀಲತೆಯ ಪ್ರಜ್ಞೆಯ ದೀವಟಿಗೆಯನ್ನು ಹೊತ್ತಿಸಬಹುದು ಎಂಬುದಕ್ಕೆ ಈ ಬಾರಿಯ ಅವಧಾನವೇ ಸಾಕ್ಷಿ ಮತ್ತು ನಂತರದಲ್ಲಿಯೂ ಹಲವು ಸ್ತರದ ಪರಿಣಾಮವಿಶೇಷಗಳನ್ನು ಕೇಳಿ–ನೋಡಿದಾಗ ಪ್ರಸಕ್ತಯುಗದಲ್ಲೂ ಬಾಜಾ–ಭಜಂತ್ರಿಗಳಿಲ್ಲದೆ ನಿಜವಾದ ಪ್ರತಿಭಾಪುಷ್ಪಕ್ಕೆ ಆಸ್ವಾದನೆಯ ದುಂಬಿಗಳು ತುಂಬಿಬರುವುದುಂಟು ಎಂಬುದು ಅಕ್ಷರಶಃ ಅರಿವಾಗಿದೆ.

ಅದೇ ಸ್ಮೃತಿಯಲ್ಲಿ ಕುಳಿತಿದ್ದಾಗ ತೋರಿಬಂದದ್ದೇ ನಾಟ್ಯವಧಾನದ ಕಲ್ಪನೆಯ ಇತಿಮಿತಿ, ಸವಾಲು ಮತ್ತು ಸಾಧ್ಯತೆಗಳು. ಎಷ್ಟರಮಟ್ಟಿಗೆಂದರೆ 'ಚಿತ್ತೈಕಾಗ್ರ್ಯಮವಧಾನಂ'– ಮನಸ್ಸಿನ ಏಕಾಗ್ರತೆಯೇ ಅವಧಾನ ಎನ್ನುವುದಾದರೆ ನಾಟ್ಯವಧಾನದ ಕಲ್ಪನೆಯೂ ಮನಸ್ಸಿನೊಳಗಿನ ಅವಧಾನವಾಗಿ ಇಂದಿಗೂ ಹರಿದಾಡುತ್ತಿದೆ. ಆದರೆ ಅದರ ಸವಾಲುಗಳನ್ನು ನೆನೆದಾಗಲೆಲ್ಲ ಇಂದಿನ ನೃತ್ಯಕ್ಷೇತ್ರ ಇಂತಹ ಅತ್ಯದ್ಭುತ ಕಲ್ಪನೆಗೆ ಎಷ್ಟರಮಟ್ಟಿಗೆ ಸಮಕಾಲೀನವಾಗಿ ತೆರೆದುಕೊಳ್ಳಬಹುದು ಎಂಬ ಪ್ರಶ್ನೆ ಉದ್ಭವವಾಗಿ ಅಲ್ಲಿಂದಲೇ ಮಾಯವೂ ಆಗುತ್ತಿದೆ. ಕೊನೇಪಕ್ಷ ಜೀವ ತುಂಬುವ ಕಿಂಚಿತ್ ಪ್ರಯತ್ನವನ್ನಾದರೂ ನಡೆಸಿತೇ, ಆಗುವ ಸವ್ಯಾಪಸವ್ಯಗಳೇನು ಎಂಬ ಕೋಲಾಹಲವೂ ಜಾಗೃತವಾಗುತ್ತದೆ. ಒಂದುವೇಳೆ ಅಂತಹ ಅವಧಾನಶೀಲ ಪ್ರವೃತ್ತಿಯನ್ನು ಕಲಾವಿದರು ತುಂಬಿಕೊಳ್ಳುವುದಾದಲ್ಲಿ ನಿಜಕ್ಕೂ ನಾಟ್ಯಸರಸ್ವತಿ ಧನ್ಯಳೆನಿಸಿಕೊಂಡಾಳು !

ಇಂತಹ ಅತಿಶಯೋಕ್ತಿಗೆ ಕಾರಣವಿದೆ. ಪ್ರಸ್ತುತ ದಶಕಗಳಲ್ಲಿ ನಾಟ್ಯದ ಕಲ್ಪನೆ ಗಣನೀಯವಾಗಿ ಕುಸಿಯುತ್ತಾ ಚರ್ವಿತ ಚರ್ವಣ, ಸವಕಲು ನಾಣ್ಯಗಳೇ ನೃತ್ಯಕ್ಷೇತ್ರದಲ್ಲಿ ಚಲಾವಣೆಯಲ್ಲಿರುವಾಗ ಸಹೃದಯ ಪ್ರೇಕ್ಷಕ ಸಹಜವಾಗಿಯೇ ದೂರಸರಿಯಬೇಕಾದ ಅನಿವಾರ್ಯತೆ. ಆನಂದದ ಪರಮೋದ್ದೇಶವೇ ತಿಳಿಯದ ಕಲಾವಿದರು ಉದಾತ್ತತೆಯ ಆಹಾರ್ಯದೊಳಗೆ ಅಪ್ರಾಮಾಣಿಕ ಬಾಣಸಿಗರಾದರೆ ಬಾಯ್ಮಾತಿನಲ್ಲಿ ಆನಂದದ ಉಪಚಾರ ಗಹಗಹಿಸಿ 'ಹೇಳುವುದು ಉಪದೇಶ, ತಿನ್ನುವುದು ಬದನೆಕಾಯಿ' ಎಂಬುದಕ್ಕೆ ಅನ್ವರ್ಥವೆನಿಸುವ ಅಡುಗೆ ಸಿದ್ಧಗೊಳ್ಳುತ್ತದೆ. ಸಹೃದಯನ ಮುಂದಿಕ್ಕಬೇಕಾದ ಷಡ್ರಸೋಪೇತವೆನಿಸಬೇಕಾದ ಕಲೆಯ ಬಾಳೆಲೆ ಹಳಸಲು ತಿಪ್ಪೆಯಂತಾಗುತ್ತದೆ. ಈ ನಿಟ್ಟಿನಲ್ಲಿ ಅವಧಾನಸ್ವರೂಪದ ಕಿಚ್ಚು ಕೊಂಚಮಟ್ಟಿಗಾದರೂ ನೃತ್ಯವಲಯಕ್ಕೆ ಹಬ್ಬಿದರೆ ಹಸಿ–ಹಸಿಯಾಗಿಯೇ ಉಳಿದ ಅಥವಾ ಅದೆಷ್ಟೋ ಅರೆಬೆಂದ ಪದಾರ್ಥಗಳು ಪಕ್ವಗೊಳ್ಳಲು ಆ ಮೂಲಕ ಸಹೃದಯನ ಪದಾರ್ಥವಾಗಲು ಸಾಧ್ಯವಾದೀತು ಎಂಬುದೇ ಇಲ್ಲಿನ ಕಲ್ಪನೆ. ಈ ಹಂತದಲ್ಲೇ ನೃತ್ಯವೆಂಬುದು ಚಾಕ್ಷುಷ ಯಜ್ಞದ ಸಾರ್ಥಕ್ಯ ಪಡೆದು ಹಸಿವು ನೀಗುವ ಭೋಜನವಾದಿತು. ಇಲ್ಲವಾದರೆ ಸಾಮಾನ್ಯ ಊಟಕ್ಕೆ 'ಅರೆಕಾಸಿನ ಮಜ್ಜಿಗೆಯೂ' ಸಿಗದಂತಾಗಿ ಹುಳಿ ನಾರುವ ಮಜ್ಜಿಗೆ ಕಲೆಯ ಬೇರಿನ ಕತ್ತನ್ನೇ ಕೊಯ್ದೀತು. ರಕ್ತ–ಮಾಂಸಗಳಲ್ಲೇ ಮಿಂದೇಳಬೇಕಾದ ಆಹಾರಪ್ರಜ್ಞೆ ಸಾರ್ವಕಾಲಿಕವಾದೀತು !

ಇಂತಹ ಅರೆಕಾಸಿನ ಮಜ್ಜಿಗೆಯ some–ಸಾರದಿಂದಲೇ ಸಹೃದಯನು ನೃತ್ಯಾದಿ ಸಂಗತಿಗಳ ಸ್ವರೂಪ ಆಕರ್ಷಣೀಯವೂ, ಉಲ್ಲಾಸವೂ, ಕುತೂಹಲಕಾರಿಯಾಗಿಯೂ, ಆನಂದಾಶ್ರಿತವೂ ಆಗಬಲ್ಲುದೆಂಬು ದನ್ನೇ

ಮರೆಯುತ್ತಿದ್ದಾನೆ. ಮೂಗಿಗೆ ತುಪ್ಪ ಹಚ್ಚುವ ಕಾಯಕ ವ್ಯಾಪಕವಾಗುತ್ತಲಿರುವುದರಿಂದ ಪ್ರಯೋಜನಾತೀತ ಆನಂದದ ಹುಡುಕಾಟದಲ್ಲಿರುವ ಪ್ರೇಕ್ಷಕ ಪರದೆ ಸರಿಸಿ ಕಲೆಯ ಪ್ರಯೋಜನ ಹುಡುಕುವ ಕಲಾವಿದರಿಂದ ಮಾರುದೂರ ಹಾರುತ್ತಿದ್ದಾನೆ. ಇದರ ಫಲ– 'ಶಾಸ್ತ್ರೀಯ'(?) ನೃತ್ಯ ಕಲೆಗಳಿಂದ ಪ್ರೇಕ್ಷಕವರ್ಗ ದೂರ ಉಳಿಯುತ್ತಿದೆ ಎಂಬ 'ಆರೋಪ'ಗಳು ಕೇಳಿಬರುತ್ತಲೇ ಇವೆ.

ಈ ಹಿನ್ನೆಲೆಯಲ್ಲಿ ಸ್ಮರಣೆ, ಸದ್ಯಸ್ಫೂರ್ತಿ, ಬುದ್ಧಿ ಮತ್ತು ಕವಿತ್ವಶಕ್ತಿಗಳಿಂದ ನಡೆಸುವ ವಿದ್ವತ್ಕಲೆಯ ಸೋಂಕು ವಾಸನಾಮಾತ್ರೇಣ ಸಹಜವಾಗಿ ನಾಟ್ಯಾವಧಾನ ಎಂಬ ಹೆಸರಿನಲ್ಲಿ ತಗುಲಿದರೂ ಸಾಕು; ಕಲೆಯು ಕಲಾವಿದರ ಸಾಂಕ್ರಾಮಿಕ ಖಾಯಿಲೆಗಳಿಂದೆದ್ದು ಸಂಜೀವನೀಶಕ್ತಿ ಪಡೆದಾವು ಎಂಬುದು ಕಲಾದಿಗಂತದ ಕೊನೆಯಲ್ಲಿರುವ ಒಂದು ಕಿರಣ. ಇದರ ಸಾಕಾರಕ್ಕೆ ಮತ್ತೊಬ್ಬ ಆಂಜನೇಯ ಅವತರಿಸಬೇಕಾದ ಅನಿವಾರ್ಯತೆಯೂ ಇಲ್ಲದಿಲ್ಲ. ಆದಾಗ್ಯೂ ಅಳಿಲುಸೇವೆಯನ್ನೆಳೆಸುವವರು ಮುಂದೆ ಬಂದರೆ ಒಂದೊಂದು ಮರಳಕಣಗಳೂ ತೇಲುವ, ನಿಲ್ಲುವ ಶಕ್ತಿ ಪಡೆದಾವು. ಅವಧಾನ ವೆಂಬುದು ವಸ್ತುವಾಗುವುದಕಿಂತಲೂ ಮುಖ್ಯವಾಗಿ ನೃತ್ಯದ ಕ್ರಿಯೆಯಾಗುವ ಸನ್ನಿವೇಶವೇ ಇಲ್ಲಿ ಆಪ್ತ. – ಇದು ಇಲ್ಲಿನ ಇಂಗಿತ.

ನೃತ್ಯದಲ್ಲಿಯೂ ಅವಧಾನಕಲೆ ನಾಟ್ಯಾವಧಾನದ ಹೆಸರಿನಲ್ಲಿ ಅಲ್ಲಲ್ಲಿ ವಸ್ತುರೂಪ ಪಡೆದು ಪ್ರಚಲಿತಕ್ಕೆ ಬಂದದ್ದಿದೆ. ಆಂಧ್ರದಲ್ಲಿ ಧಾರಾ ರಾಮನಾಥಶಾಸ್ತ್ರಿಯವರಿಂದ ಮೊದಲು ಚಾಲ್ತಿಗೆ ಬಂದ ನಾಟ್ಯಾವ ಧಾನದ ಕಲ್ಪನೆ ; ಅವರ ಕ್ಷಣಮಾತ್ರದ ಆಹಾರ್ಯಚಲನೆ ಮತ್ತು ತಮ್ಮ ಅಭಿನಯಸಾಮರ್ಥ್ಯದಿಂದ ಜನಮನ ಗೆದ್ದಿತೇ ವಿನಾ ನೃತ್ಯದ ಶಾಸ್ತ್ರೀಯ ಪರಿಚಯದ ಮುಖ ವ್ಯವಸ್ಥಿತವಾಗಿ ತೆರೆದುಕೊಳ್ಳದೇ ಹೋಯಿತು. ಪದ್ಮಾಸುಬ್ರಹ್ಮಣ್ಯಂ ಅವರು ಬಾಲಮುರಳಿಯವರ ರಚನೆಗಳಿಗೆ ಸ್ಥಳದಲ್ಲೇ ಆಶುವಾಗಿ ನರ್ತಿಸಿ ನಾಟ್ಯಾವಧಾನದ ಸ್ವರೂಪವನ್ನು ಕೊಡಲೆತ್ನಿಸಿದ್ದಾರಾದರೂ ಪೂರ್ಣವಾಗಿ ಇದರಲ್ಲಿ ತೊಡಗಿಸಿಕೊಳ್ಳುವಂತಹ ಪ್ರಮೇಯ ಅವರಿಗೊದಗಲಿಲ್ಲ. ಕರ್ನಾಟಕದಲ್ಲಿಯೂ ನಾಟ್ಯಾವಧಾನದ ಪ್ರಯತ್ನಗಳು ಅಲ್ಲೊಂದು ಇಲ್ಲೊಂದು ಎಂಬಂತೆ ನಡೆದಿವೆಯಾದರೂ ಅದು ಸ್ವಯಂಪರಿಪೂರ್ಣವಲ್ಲ ಎಂಬುದನ್ನು ವಿದ್ವಾಂಸರೇ ಅನುಮೋದಿಸುತ್ತಾರೆ.

ಅವಧಾನಿಯು ಪೃಚ್ಛಕಪಂಡಿತರು ಒಡ್ಡುವ ಸಮಸ್ಯೆಗಳಿಗೆ ಯಥೋಚಿತವಾಗಿ ಆಶುವಾಗಿ ಯಾವುದೇ ಲೇಖನಸಾಮಗ್ರಿಯಿಲ್ಲದೆ ಛಂದೋಬದ್ಧರೂಪದಲ್ಲಿ ಪರಿಹಾರ ನೀಡುವುದು ಅವಧಾನಕಲೆಯ ವಿಶೇಷ. ಧಾರಣ (ಸ್ಮರಣೆಯಿಂದ ಹೇಳುವಂತಾದ್ದು), ಪೂರಣ(ಸಮಸ್ಯಾಪೂರ್ತಿ) ಅವಧಾನದ ಮೂಲಧಾತು ಗಳಾದರೂ ಜನರಂಜನೆ ಮತ್ತು ಅವಧಾನಿಯ ಸೃಷ್ಟಿಶೀಲತೆಯನ್ನು ಕಾಣಿಸಿಕೊಡಲು ಧಾರಾ ವಿಶೇಷವೂ ಹುಟ್ಟಿಕೊಂಡಿದೆ. ಅಷ್ಟಕ್ಕೂ ನಾಟ್ಯಾವಧಾನದ ಸ್ವರೂಪ ಎಂದಿನ ಅವಧಾನದ ಸ್ವರೂಪಕ್ಕಿಂತ ಸಾಕಷ್ಟು ಭಿನ್ನ ಮತ್ತು ಅಚ್ಚುಕಟ್ಟಾದ ಸಂವಿಧಾನವೂ ಇತರೆ ಅವಧಾನಗಳಂತೆ ಈವರೆಗೆ ಸ್ಪಷ್ಟವಾಗಿ, ಯುಕ್ತನೆಲೆಯಲ್ಲಿ ಒದಗಿಲ್ಲ. ಜೊತೆಗೆ ಕಲಾವಿದರ ಸಾಮರ್ಥ್ಯ, ಪ್ರತಿಭಾವೈಶಾಲ್ಯತೆಯಲ್ಲಿರುವ ಸಮಸ್ಯೆಗಳೂ ಇಂತಹ ಸಾಧ್ಯತೆಗಳನ್ನು ಹುಡುಕುವಲ್ಲಿ ಮನಮಾಡಿಲ್ಲ. ನೃತ್ಯ ದೃಶ್ಯಕಾವ್ಯವಾಗಿರುವುದ ರಿಂದ ಪೂರಣ, ಧಾರಣಾಂಶಗಳಿಗಿಂತಲೂ ಧಾರೆಯ ಧಾರಾಳತೆ ಇಲ್ಲಿ ಬೇಕು. ಕೋರಿದ ವಸ್ತು ವಿನ ಮೇಲೆ ಅಭಿನಯ, ಆಶುನೃತ್ತವಿನ್ಯಾಸ ನೈಪುಣ್ಯತೆ, ನಟುವಾಂಗಾದಿ ವಾದ್ಯಗಳಲ್ಲಿ ಪರಿಣತಿ, ವಿರುದ್ಧ ಭಾವಗಳನ್ನು ಏಕಕಾಲದಲ್ಲಿ ನಿರ್ವಾಹ ಮಾಡುವ ವ್ಯುತ್ಪತ್ತಿ, ನಾಟ್ಯ/ನೃತ್ಯದ ಮೂಲ ಸಿದ್ಧಾಂತ ಹಾಗೂ ಪ್ರಾಯೋಗಿಕಾಂಶಗಳ ಜ್ಞಾನವಿಸ್ತಾರ, ಆಹಾರ್ಯ ಕೌಶಲ್ಯ, ಧ್ವನಿ–ಔಚಿತ್ಯಾದಿ ಸಂಸ್ಕಾರ, ಆಂಗಿಕ ಸಮೃದ್ಧಿ, ವಾಚಿಕಧಾರೆ ..ಹೀಗೆ ಹತ್ತು ಹಲವು ಆಯಾಮಗಳಿಂದ ನಾಟ್ಯಾವಧಾನವನ್ನು ನಡೆಸಬಹುದಾದರೂ ಇಂದಿನ ಶಾಸ್ತ್ರೀಯ ನೃತ್ಯಪದ್ಧತಿಯ ಮಾರ್ಗಚೌಕಟ್ಟಿಗೆ ಸಾಮಾನ್ಯಕ್ಕೆ ಕೈಗೆಟುಕುವಂತಹ ಸರಕಲ್ಲ.

ಕಲಾವಿದರ ಪ್ರತಿಭಾ ನೈಪುಣ್ಯತೆ, ಸಹೃದಯಶೀಲ ವ್ಯಕ್ತಿತ್ವ ಮತ್ತು ನೃತ್ಯಪ್ರಾವೀಣ್ಯ–ಪಾಂಡಿತ್ಯಕ್ಕೆ ಅವಧಾನವೆಂಬ ನಿಕಷ ಇಂದಿನ ಯಾವ ಪ್ರತಿಭಾಸ್ಪರ್ಧೆ, ಪ್ರದರ್ಶನಗಳಿಗಿಂತಲೂ ಮಿಗಿಲು. ಈ ನಿಟ್ಟಿನಲ್ಲಿ ಶುಕಪಾಠದಂತೆ ಆಗುತ್ತಿರುವ ನೃತ್ಯಾವರಣಕ್ಕೆ ಅವಧಾನದ ವರ್ಣ ಒದಗಿದರೆ ಹೂರಣ ಸೊಗಸಾಗಿ, ಪಾಕ ಪಕ್ವಗೊಂಡು ಸ್ವಾದಿಷ್ಟವಾದ ಸಿಹಿಯಾಗಬಹುದು. ಒಟ್ಟಾರೆಯಾಗಿ ನಾಟ್ಯಾವಧಾನದ ಸ್ವರೂಪಕ್ಕೆ ಅಲ್ಲದಿದ್ದರೂ ನಾಟ್ಯ/ನೃತ್ಯವನ್ನು ಧಾರೆ(ಆಶು)ಯಾಗಿಸುವ ಮಟ್ಟಿನ ಸಂಕಲ್ಪ ನೃತ್ಯಕಲಾವಿದರಲ್ಲಿ ಮೂಡಿದರೆ ಕಲಾವರಣವು ಕಲಾರ್ಣವವಾಗಿ ನೃತ್ಯಸಾರ ಸರ್ವಸ್ವವನ್ನೂ ಒಳಗಿಳಿಸುವ ದ್ರವ್ಯವಾದೀತು; ರಸೌಷಧವಾದೀತು. ಅಂತಹ ಕಾಲ ನಮ್ಮನ್ನು ಸಂಧಿಸಲಿ.. ಅಲ್ಲವೇ?

ಪ್ರೀತಿಯಿಂದ,

**ಸಂಪಾದಕರು**

# ಲಲಿತ ಲಹರಿ

**ಪ**ದ್ಯದಲ್ಲಿ ಮದ್ಯಕಿಂತಲೂ ಹೆಚ್ಚಿನ ಮತ್ತಿದೆ. ಹಾಗಾದರೆ ನೀವೂ ಪದ್ಯಪಾನಿಗಳಾಗುತ್ತೀರೇನು? ಅದಕ್ಕಾಗಿಯೇ ಇದೋ ಆಯ್ದ ಕೆಲವೊಂದು ಛಂದೋಬದ್ಧವಾದ ಪದ್ಯಗಳು **'ಪದ್ಯಪಾನ'**ದಿಂದ ನಿಮಗಾಗಿ...

ಬನ್ನಿ ; ಬೇಲೂರಿನ ಮದನಿಕೆ 'ಶುಕಭಾಷಿಣಿ'ಯನ್ನು ಆವರಣ ಪುಟದಲ್ಲಿ ಕಂಡ ನೀವು ಈಗ ಕವಿಪ್ರಪಂಚದ ಪರವಾಗಿ ಆಕೆಯನ್ನು ಮಾತನಾಡಿಸಿದ ಸಾಂಗತ್ಯವನ್ನು ಅನುಭವಿಸಲಿದ್ದೀರಿ.

ಅಂದಹಾಗೆ ನೀವೂ ಛಂದೋಬದ್ಧವಾಗಿ ನೃತ್ಯದ ಸಾಹಿತ್ಯಗಳನ್ನು ರಚಿಸಲು ಆಸಕ್ತಿಯುಳ್ಳವರೇ? ಅಭಿಜಾತ ಕಾವ್ಯಪರಂಪರೆಯನ್ನು ಆಸ್ವಾದಿಸುತ್ತೀರೇನು? ಹಾಗಾದರೆ ಪದ್ಯಪಾನ ವೆಬ್‌ಸೈಟ್‌ನ್ನು ಗಮನಿಸಿರಿ. **padyapaana.com**



– **ಶತಾವಧಾನಿ ಡಾ.ಆರ್. ಗಣೇಶ್**

ಶಿಲೆಗಳ ಕಲೆಗಳ ಕತಮಂ
ಕೆಲದೊಳ್ ಸಂದಿರ್ಪ ಕೀರಕುಲಿಯುವ ಭರದೊಳ್।
ಶಿಲೆಯಾದೆಯೇಂ ಮುಗುದೆ! ಮೇಣ್
ಕಲೆಗೊಲಿಯದ ಕಾದಲಂಗೆದುರ್ನೋಳ್ಪುದರಿಂ? ॥

– **ವಿ.ಆರ್. ಭಟ್, ಬೆಂಗಳೂರು**

ಕೈಯ್ಯಮೇಲೆ ಹಕ್ಕಿ ಕುಳಿತು
ಮೈಯ್ಯಮಾಟ ನೋಡುತಿತ್ತು
ಹುಯ್ಯಲೆಬ್ಬಿಸುತ್ತ ಕುಣಿದು ಬಹಳ ಹರುಷದಿ ।
ಸುಯ್ಯನೆಂದು ಸುಳಿದ ಮರುತ
ಪೆಯ್ಯಗಾಲನಿಕ್ಕಿ ಹರಿದ
ತೈಯ್ಯ ಥಕಿಟವೆನುತ ಮನದಿ ಭರತವರುಷದಿ॥

– **ಚಂದ್ರಮೌಳಿ, ಬೆಂಗಳೂರು**

ಮದನಿಕೆಗಮಧ್ಯಾತ್ಮ ಬ್ರಹ್ಮಸೂತ್ರವ ತೊಡಿಸಿ
ಮದನಸೂತ್ರವ ಕರಣಶಾಸ್ತ್ರದೊಡವೆಗಳ ।
ಎದೆನೊಂದ ಮುಗುದೆ ಶಿಲೆಯಾದ ನವಭಾವ ಮಿಗೆ
ಮುದವೀವ ಪದ್ಯವೆರಡುಂ ಸೊಗಸಿತ್ತೈ ॥ ■




# ದೇವರನಾಮ ನೃತ್ಯ ಸಂಯೋಜನೆಯ ಒಡತಿ : 'ರೇವತಿ' ನರಸಿಂಹನ್

– ಸಂದರ್ಶನ : ನಿವೇದಿತಾ ಶ್ರೀನಿವಾಸ್



**'ಕರ್ನಾಟಕ ಕಲಾಶ್ರೀ', 'ರಾಜ್ಯೋತ್ಸವ ಪ್ರಶಸ್ತಿ'ಗಳಿಂದ ಸನ್ಮಾನಿತರಾದ, ಭರತನಾಟ್ಯದಲ್ಲಿ ತಮ್ಮದೇ ಛಾಪು ಮೂಡಿಸಿರುವ, ನೃತ್ಯಸಂಯೋಜನೆಯಲ್ಲಿ ವಿಶೇಷವಾದ ವ್ಯುತ್ಪತ್ತಿ ಹೊಂದಿದವರೆಂದು ಪ್ರಸಿದ್ಧರಾದ ಹಿರಿಯ ಗುರು ಶ್ರೀಮತಿ ರೇವತಿ ನರಸಿಂಹನ್ ಅವರು ತಮ್ಮ ನರ್ತನಶಾಲೆ 'ನಾಟ್ಯ ನಿಕೇತನ'ದ ಮೂಲಕ ಕಳೆದ 35 ವರ್ಷಗಳಿಂದ ನೃತ್ಯಕ್ಷೇತ್ರಕ್ಕಾಗಿ ಅನವರತ ಶ್ರಮಿಸುತ್ತಿದ್ದಾರೆ. ಇವರ ನಾಯಕತ್ವದ 'ಶಿವಕಾಮಿ' ತಂಡವು ಪ್ರತಿಷ್ಠಿತ ಉತ್ಸವಗಳಲ್ಲಿ ನೃತ್ಯ ರೂಪಕಗಳನ್ನು ಪ್ರದರ್ಶಿಸಿದ್ದು ; ಇವರ ಗರಡಿಯಲ್ಲಿ ಹಲವಾರು ಪ್ರಗತಿಪರ ಚಿಂತನೆಗಳನ್ನು ಹೊಂದಿದ ಉತ್ತಮ ಶಿಷ್ಯರು ರೂಪುಗೊಳ್ಳುತ್ತಲೇ ಇದ್ದಾರೆ. ರೇವತಿ ಅವರ ಸಂದರ್ಶನದ ಆಯ್ದ ತುಣುಕುಗಳು ಇಲ್ಲಿವೆ.**

- **ತಮ್ಮ ನೃತ್ಯ ಕಲಿಕೆಯ ಹಿನ್ನೆಲೆ ಹೇಗಿತ್ತು? ಆಗಿನ ವಾತಾವರಣ, ಪ್ರೋತ್ಸಾಹ ಹೇಗಿದ್ದವು?**

ಅಂದಿನ ದಿನಗಳಲ್ಲಿ ನೃತ್ಯ ಕಲಿಯುವುದು ಸುಲಭದ ಮಾತಾಗಿರಲಿಲ್ಲ. ಹಾಗಿದ್ದರೂ, 6 ವರ್ಷದವಳಾಗಿದ್ದ ನನ್ನಲ್ಲಿನ ಪ್ರತಿಭೆಯನ್ನು ಗುರುತಿಸಿ, ನನ್ನ ತಂದೆಯವರು ಶ್ರೀಮತಿ ಕೌಸಲ್ಯ ಅವರಲ್ಲಿ (ಈಕೆ ಪದ್ಮಶ್ರೀ ವಳವೂರ್‌ರಾಮಯ್ಯಪಿಳ್ಳೈರವರ ನೇರ ಶಿಷ್ಯೆ) ನೃತ್ಯಾಭ್ಯಾಸಕ್ಕೆ ಕಳಿಸಿದರು. ಅಲ್ಲಿ ಗುರುಕುಲ ಪದ್ಧತಿಯಲ್ಲಿ ಕಲಿತದ್ದು. ಒಂಭತ್ತನೇ ವಯಸ್ಸಿನಲ್ಲಿ ರಂಗಪ್ರವೇಶ ಮಾಡಿದ ನಂತರ ಅನೇಕ ಕಾರ್ಯಕ್ರಮಗಳಲ್ಲಿ, ಸಭೆಗಳಲ್ಲಿ ಭಾಗವಹಿಸಿದೆ. ಗುರುಗಳು ಕಲಿಸಿದ್ದನ್ನು ಯಥಾಪ್ರಕಾರ ಅಭ್ಯಾಸ ಮಾಡುವುದು, ಅದನ್ನೇ ಕಾರ್ಯಕ್ರಮದಲ್ಲಿ ಪ್ರದರ್ಶಿಸುವುದು ಇದೇ ಅಂದಿನ ಪರಿಪಾಠವಾಗಿತ್ತು. ಪ್ರಾಯೋಗಿಕ ನೆಲೆ ಬಿಟ್ಟು ಬೇರೆಡೆ ಗಮನಹರಿಸುತ್ತಿರಲಿಲ್ಲ. ಕಲಿತದ್ದನ್ನು ಪ್ರದರ್ಶಿಸಿದರೆ ಮುಗಿಯಿತು. ಈಗ ಹಾಗಿಲ್ಲ. ಕರ್ನಾಟಕ ಸರ್ಕಾರದ ಜೂನಿಯರ್, ಸೀನಿಯರ್, ವಿದ್ವತ್ ಪರೀಕ್ಷೆಗಾಗಿ ಶಾಸ್ತ್ರ ಭಾಗವಿದ್ದು ಉತ್ತಮ ಬೆಳವಣಿಗೆ. ಜೊತೆಗೆ ಶೈಕ್ಷಣಿಕವಾಗಿಯೂ ನೃತ್ಯದಲ್ಲಿ ಬಿ.ಎ., ಎಂ.ಎ.ಗಳು ಗುರುತಿಸಿಕೊಳ್ಳುತ್ತಿರುವುದರಿಂದ ಪ್ರಯೋಗದ ಹಿನ್ನೆಲೆಯಾಗಿ ಶಾಸ್ತ್ರವನ್ನು ಅರಿಯುವುದು ಮುಖ್ಯವಾಗಿದೆ.



ತಂದೆಯವರ ಪ್ರೋತ್ಸಾಹದಿಂದ 16 ವರ್ಷಗಳ ಕಾಲ ಕಲಿತೆ. ಎಲ್ಲರಂತೆ, ಮದುವೆಯಾದ ಬಳಿಕ



ಮುಂದುವರಿಸಲು ಸಾಧ್ಯವಿಲ್ಲ ಎಂದು ನಂಬಿದ್ದೆ. ಆದರೆ, ಪತಿಯವರ ಪ್ರೋತ್ಸಾಹದಿಂದ ಮತ್ತೊಮ್ಮೆ ಕ್ಷೇತ್ರದೊಳಗೆ ಕಾಲಿಡಲು ಸಾಧ್ಯವಾಯಿತು.

**• ಕಲಿಕೆಯಲ್ಲಿರುವಾಗಿನ ಜ್ಞಾನಕ್ಕೂ ಕಲಿಸುವ ಜ್ಞಾನಕ್ಕೂ ಸಾಕಷ್ಟು ಅಂತರ. ಹೇಗೆ ನಿಭಾಯಿಸಿದಿರಿ?**

ಹೌದು. ಹಲವು ಹಂತಗಳಲ್ಲಿ ಮಾರ್ಪಾಡು ಮಾಡಿಕೊಳ್ಳುವುದು ಅನಿವಾರ್ಯವಾಯಿತು. ಏನೇ ಕಲಿತರೂ ಅದು ಪ್ರಯೋಗದಲ್ಲಿ ಕಾಣಬೇಕು. ಏಕೆಂದರೆ ಇದು ದೃಶ್ಯ ಕಲೆ. ಮಿಕ್ಕಂತೆ, ಭರತನಾಟ್ಯದ ಮೂಲಭೂತ ರೂಪುರೇಷೆಗಳಲ್ಲಿ ಯಾವ ಬದಲಾವಣೆಯನ್ನೂ ಮಾಡಿಲ್ಲ. ಅಡವುಗಳನ್ನು ಇಂದಿಗೂ ಹಾಗೆಯೇ ಕಲಿಸುತ್ತೇನೆ. ವಳವೂರು ಶೈಲಿಯಲ್ಲಿ ಲಾಸ್ಯವೇ ಪ್ರಧಾನ ಅಂಶ. ಆದರೆ, ತಾಳವನ್ನೂ ಅಚ್ಚುಕಟ್ಟಾಗಿ ನಿರ್ವಹಿಸಬಹುದು ಎಂಬ ಕಾರಣದಿಂದ ನೃತ್ತದಲ್ಲಿನ ಲಾಸ್ಯ ಭಾಗದಲ್ಲಿ ಸ್ವಲ್ಪ ಬಿಗಿತ ತಂದಿದ್ದೇನೆ.

**• ದೇವರನಾಮಗಳ ಕೊರಿಯೋಗ್ರಫಿಯಲ್ಲಿ ತಮ್ಮದು ಎತ್ತಿದ ಕೈ. ಹೀಗೆ ಸಂಯೋಜನೆ ಮಾಡುವಾಗ ಯಾವ ಅಂಶಗಳೆಡೆಗೆ ಗಮನ ಕೊಡುತ್ತೀರ?**

ಮೊದಲು ಸಾಹಿತ್ಯವನ್ನು ತಾರ್ಕಿಕವಾಗಿ ಅಧ್ಯಯನ ಮಾಡುತ್ತೇನೆ. ಹಿಂದಿನ ಕಾಲದಲ್ಲಿ ಒಂದೇ ಸಾಲನ್ನು ಮೂರು ಮೂರು ಬಾರಿ ಮಾಡಿ ವಿಸ್ತರಿಸುವುದೇ ಸಾಮಾನ್ಯವಾಗಿತ್ತು. ಆದರೆ ನಾನು, ಸಾಹಿತ್ಯ ಮತ್ತು ಪಾತ್ರದ ಸ್ಥಾಯೀ ಭಾವ ಹಾಗೆಯೇ ಇಟ್ಟುಕೊಂಡು, ಅಭಿನಯಿಸುವಾಗ ವಿವಿಧ ರೀತಿಯಲ್ಲಿ ತೋರುವಂತೆ ಸಂಯೋಜಿಸುತ್ತೇನೆ. ಒಮ್ಮೊಮ್ಮೆ ಒಂದೇ ಪಾತ್ರ ಇತರ ಪಾತ್ರಗಳನ್ನೂ ಅಭಿನಯಿಸುವಂತೆ ಸಂಯೋಜಿಸಿದ್ದರೆ, ಮತ್ತೊಮ್ಮೆ ಅದೇ ಪಾತ್ರ ಉಳಿದ ಪಾತ್ರಗಳಿಗೆ ಪ್ರತಿಕ್ರಿಯೆ ನೀಡುವಂತೆ ಮಾಡುತ್ತೇನೆ. ಒಟ್ಟಿನಲ್ಲಿ ವೈವಿಧ್ಯತೆ ಇರಬೇಕು. ಹೆಚ್ಚು ಹೊತ್ತು ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವಂತಿರಬೇಕು. ಸಾಹಿತ್ಯದಲ್ಲಿನ ಪದಗಳಿಗೆ ಹೊಂದುವಂತೆ, ಆದರೆ ಅಭಿನಯಕ್ಕೆ ಭಂಗ ಬರದಂತೆ ನೃತ್ತವನ್ನೂ ಸೇರಿಸುತ್ತೇನೆ. ಆಗ ನೋಡಲು ಇನ್ನೂ ಆಕರ್ಷಕವಾಗಿ ಕಾಣುತ್ತದೆ.

**• ಉತ್ತಮ ನೃತ್ಯಪಟುಗಳನ್ನು ಕ್ಷೇತ್ರಕ್ಕೆ ಕೊಡುಗೆಯಾಗಿ ಕೊಟ್ಟಿದ್ದೀರ. ಈ ನಿಟ್ಟಿನಲ್ಲಿ ತಾವು ಕೊಡುವ ತರಬೇತಿ ವಿಧಾನ ಹೇಗಿರುತ್ತದೆ? ಶಿಷ್ಯರಲ್ಲಿ ತಮ್ಮ ಅಪೇಕ್ಷೆಯ ಗುಣ ಯಾವುದು?**



ಎಷ್ಟೇ ಹಿರಿಯರಾಗಲಿ ನೃತ್ಯಪ್ರದರ್ಶನ ಕೊಡಬೇಕೆಂದರೆ, ದೈಹಿಕ ಸಾಮರ್ಥ್ಯ ಕಾಪಾಡಿಕೊಂಡು ಬರುವುದು ಅತೀ ಮುಖ್ಯ. ಸತತ ಅಭ್ಯಾಸ ಮಾಡಲೇಬೇಕು. ಸಣ್ಣದಕ್ಕೆಲ್ಲಾ ತೃಪ್ತಿ ಹೊಂದಬಾರದು. ನಾನಂತೂ ಒಂದೊಂದು ಸಣ್ಣ ಅಂಶವನ್ನೂ ಸೂಕ್ಷ್ಮವಾಗಿ ಗಮನಿಸುವವಳು. ನಿರಂತರ ಪರಿಶ್ರಮ ಇರಲೇಬೇಕು. ಸಾಮಾನ್ಯವಾಗಿ ಅಭಿನಯದ ನೃತ್ಯಬಂಧಗಳನ್ನು ನಿಭಾಯಿಸಿಬಿಡುತ್ತಾರೆ. ಆದರೆ ನೃತ್ತ ಬಂಧಗಳಿಗೆ ದೇಹದಂಡನೆ ಮಾಡಲೇಬೇಕು.

ಇನ್ನು ಅಭಿನಯ ಅಥವಾ ನೃತ್ತಬಂಧವನ್ನು ಕಲಿಸುವಾಗ ನಿಧಾನಗತಿ ಯಲ್ಲಿ ಕಲಿಸುತ್ತೇನೆ. ನೃತ್ತದಲ್ಲಿ ಅಂಗಶುದ್ಧತೆ



ಬರಲು ಮತ್ತು ಅಭಿನಯದಲ್ಲಿ ಮುಳುಗಿ ಅನುಭವಿಸಲು ಇದು ಅನುಕೂಲವಾಗುತ್ತದೆ. ಇಷ್ಟಲ್ಲದೆ, ಶಿಷ್ಯರಲ್ಲಿಯೂ ಆಸಕ್ತಿ, ಶ್ರದ್ಧೆ ಇದ್ದರೆ ಕಲಿಕೆ ಅರ್ಥಪೂರ್ಣವಾಗುತ್ತದೆ. ಹೇಳಿಕೊಟ್ಟಿದ್ದಷ್ಟನ್ನೇ ಒಪ್ಪಿಸದೆ ಸ್ವಂತಿಕೆಯನ್ನೂ ಹೊರ ಹಾಕುವಂತೆ ಪ್ರೇರೇಪಿಸುತ್ತೇನೆ. ಜೊತೆಗೆ, ಶಿಷ್ಯಂದಿರಿಗೆ ಬೇರೆ ಬೇರೆ ನರ್ತನ ಕಾರ್ಯಕ್ರಮಗಳನ್ನು ನೋಡುವಂತೆಯೂ ಹೇಳುತ್ತೇನೆ. ಒಳ್ಳೆಯ ಅಂಶಗಳಿದ್ದರೆ ಅಳವಡಿಸಿಕೊಳ್ಳಲೂ ಅನುಮತಿ ಕೊಡುತ್ತೇನೆ. ಆದರೆ ಚೌಕಟ್ಟು ಮೀರದಂತೆ ಎಚ್ಚರಿಸುತ್ತೇನೆ.

- **ಮುಂದಿನ ಪ್ರಶ್ನೆಗೆ ತಾವೇ ಮುನ್ನುಡಿ ಹಾಕಿದಂತಾಯ್ತು. ಈ ಶೈಲಿ, ಸಂಪ್ರದಾಯ, ಶಾಸ್ತ್ರ, ನಿಯಮಗಳಿಗೆ ಎಷ್ಟರಮಟ್ಟಿಗೆ ಬದ್ಧರಾಗಿರಬೇಕು? ಹೊಸ ಪ್ರಯೋಗಗಳನ್ನು ಶಿಷ್ಯರು ಬಯಸಿದಾಗ ಯಾವ ರೀತಿ ಸ್ಪಂದಿಸುತ್ತೀರಿ?**

ಹಲವರಿಗೆ ಹಲವು ತರಹದ ಶೈಲಿ ಹೊಂದುತ್ತದೆ. ಅವರಿಗೆ ಅದನ್ನೇ ರೂಢಿಸಿಕೊಳ್ಳುವಂತೆ ಹೇಳುತ್ತೇನೆ. ಹೊಸದನ್ನು ಕಲಿತರೂ ಅದನ್ನು ನಮ್ಮದನ್ನಾಗಿಸಿಕೊಂಡು ನಮ್ಮ ಚೌಕಟ್ಟಿನೊಳಗೆ ಸೇರಿಸಿಕೊಳ್ಳಬೇಕು. ಆಗಲೇ ಸಮತೋಲನ ಬರಲು ಸಾಧ್ಯ. ಹೊಸ ಪ್ರಯೋಗಗಳಿಗೆ ನನ್ನದೆಂದೂ ಅಭ್ಯಂತರವಿಲ್ಲ. ಹೊಸದೆಂದು ಏನೇನೋ ಮಾಡಲು ಹೊರಟರೆ ಹಾಸ್ಯಾಸ್ಪದವೆನಿಸಿಕೊಳ್ಳುತ್ತದೆ. ಹಾಗಾಗಿ ನನಗೊಮ್ಮೆ ತೋರಿಸಿಯೇ ಅಳವಡಿಸಿಕೊಳ್ಳುವಂತೆ ಸೂಚಿಸಿದ್ದೇನೆ. ಚೆನ್ನಾಗಿ ಕಂಡದ್ದನ್ನು ಖಂಡಿತಾ ಒಪ್ಪಿಕೊಳ್ಳುತ್ತೇನೆ.

- **ಯುವಪೀಳಿಗೆಗೆ ಇಂದು ಆಕರ್ಷಣೆಗಳು ಅನೇಕ. ಹೀಗಿರುವಾಗ ನಮ್ಮ ಪಾರಂಪರಿಕ ನೃತ್ಯದೆಡೆ ಅವರ ಒಲವು ಮೂಡಲು ಯಾವ ಕ್ರಮ ಅನುಸರಿಸಬೇಕು?**

ಅದು ಕಷ್ಟ. ನೃತ್ಯವನ್ನೇ ವೃತ್ತಿಯನ್ನಾಗಿ ಮುಂದುವರೆಸುವವರು ವಿರಳ. ಇದಕ್ಕೇನಿದ್ದರೂ ಎರಡನೇ ಸ್ಥಾನ. ಆಸಕ್ತಿ ಇದ್ದವರು ಕಷ್ಟಪಟ್ಟಾದರೂ ಸಮಯ ಹೊಂದಿಸಿ ಕಲಿಯಲು ಬರುತ್ತಾರೆ. ಇನ್ನು ನೃತ್ಯದಲ್ಲಿ ಬಿ.ಎ., ಎಂ.ಎ. ಮಾಡುವವರಿಗೆ ನನ್ನ ಪ್ರೋತ್ಸಾಹ ಇದ್ದೇ ಇದೆ. ಅಲ್ಲಿ ಶಾಸ್ತ್ರ ವಿಭಾಗದಲ್ಲಿ ಕಲಿತದ್ದನ್ನು ಅವರ ನರ್ತನದಲ್ಲಿ ಅಳವಡಿಸಿಕೊಂಡಾಗಲೇ ಪರಿಪೂರ್ಣತೆ ಬರುವುದು. ಇದನ್ನೇ ವೃತ್ತಿಯನ್ನಾಗಿಸಿಕೊಂಡರಂತೂ ಕಲಿಸುವಾಗ ಸಿಗುವ ಆನಂದದೊಡನೆ ಗಳಿಕೆಯೂ ಆಗುತ್ತದೆ.

- **ತಮ್ಮ ಸೇವೆಯನ್ನು ಗುರುತಿಸಿ ಸರ್ಕಾರವೂ, ಹಲವಾರು ಸಂಸ್ಥೆಗಳೂ ಪ್ರಶಸ್ತಿ, ಪುರಸ್ಕಾರಗಳನ್ನು ಕೊಟ್ಟಿರುವುದು ಬಹಳ ಸಂತೋಷದ ವಿಷಯ. ಮುಂದಿನ ತಮ್ಮ ಆಶಯ, ಗುರಿಗಳೇನು?**

ಇನ್ನೂ ಸಾಧಿಸುವುದು ಬಹಳ ಇದೆ. ಅಧ್ಯಯನ ಮಾಡಬೇಕೆಂಬ ಹಂಬಲ ಇದೆ. ಹಾಗೇ ಇನ್ನೂ ಅನೇಕ ಪದ, ಜಾವಳಿಗಳಿಗೆ ನೃತ್ಯ ಸಂಯೋಜನೆ ಮಾಡಬೇಕೆಂಬ ಬಯಕೆಯೂ ಇದೆ. ಒಟ್ಟಿನಲ್ಲಿ ಕಡೆ ಉಸಿರಿರುವವರೆಗೂ ಕಲಾಸೇವೆಯಲ್ಲೇ ತೊಡಗಿರಲು ಅವಕಾಶ ಮಾಡಿಕೊಡುವಂತೆ ಸದಾಕಾಲ ಆ ಭಗವಂತನಲ್ಲಿ ಪ್ರಾರ್ಥಿಸುತ್ತಿರುತ್ತೇನೆ.



**ದೀರ್ಘ ಆಯುಷ್ಯ ಮತ್ತು ಆರೋಗ್ಯವನ್ನೂ ಭಗವಂತನು ದಯಪಾಲಿಸಲಿ. ತಮ್ಮ ಸೇವೆಯಿಂದ ನೃತ್ಯ ಕ್ಷೇತ್ರವು ಮತ್ತಷ್ಟು ಸಮೃದ್ಧಗೊಳ್ಳಲಿ ಎಂದು ಹಾರೈಸುತ್ತೇವೆ.**

**(ಲೇಖಕರು ಸ್ತುತಿ ನಾಟ್ಯಶಾಲೆಯ ಗುರು, ಭರತನಾಟ್ಯ–ಕಥಕ್ ಕಲಾವಿದೆ, ನೂಪುರ ಭ್ರಮರಿ ನೃತ್ಯ ಸಂಶೋಧಕರ ವಲಯದ ಸಂಚಾಲಕರು)** ■

## ಲಲಿತ ಲಹರಿ

# ಶೃಂಗಾರ(ಅಷ್ಟ)ನಾಯಕರ ಚಿತ್ತವೃತ್ತಿ

ಶತಾವಧಾನಿ ಡಾ. ಆರ್. ಗಣೇಶ್, ಬೆಂಗಳೂರು

*ಅಷ್ಟನಾಯಿಕೆಯರ ಅವಸ್ಥೆಗಳಿಗೆ ಪ್ರತಿಕ್ರಿಯಾತ್ಮಕವಾಗಿ ಅಷ್ಟನಾಯಕಾವಸ್ಥೆಯನ್ನು ರೂಪಿಸಬಹುದಾಗಿದ್ದರೂ ಯಾವ ಲಾಕ್ಷಣಿಕರೂ ಅಂತಹ ಅಭೂತಪೂರ್ವ ಸಾಹಸಕ್ಕೆ ಕೈಹಾಕಿರಲಿಲ್ಲ. ಆದರೆ ಶತಾವಧಾನಿ ಡಾ. ಆರ್. ಗಣೇಶರು ನಾಯಕರ ಸಾಲಿಗೆ ಹೊಸ ಸಂವಿಧಾನವನ್ನೇ ನೀಡಿದ್ದು ; ನಾಯಕಭಾವಕ್ಕೆ ಲಕ್ಷಣಗಳನ್ನೂ, ಲಕ್ಷ್ಯಗೀತಗಳನ್ನೂ, ರಾಗ–ತಾಳಬದ್ಧವಾಗಿ ರಚಿಸಿದ್ದಾರೆ. ಈಮೂಲಕ ಇದುವರೆವಿಗೂ ಲಕ್ಷಣಬದ್ಧವಾಗದ ಆದರೆ ಲಕ್ಷಣೀಕರಿಸಲು ವಿಪುಲಾವಕಾಶವಿರುವ ಅಂಶಗಳನ್ನು ಕ್ರೋಢೀಕರಿಸಲಾಗಿದೆ. ರಾಗ–ತಾಳಗಳನ್ನೂ ಸ್ವತಃ ಶತಾವಧಾನಿ ಗಣೇಶರೇ ಸಂಯೋಜಿಸಿದ್ದು ; ನಾಯಕರ ಕುರಿತಾಗಿ ಕಾಡುತ್ತಿರುವ ಸಾಹಿತ್ಯದ ಕೊರತೆಯನ್ನು ತುಂಬಿಕೊಡುವಲ್ಲಿ ಇದು ನಿಜಕ್ಕೂ ಅಸಾಧಾರಣ ಶೋಧವೇ ಸರಿ.*

*ಇದನ್ನು ಅರ್ಥೈಸಿಕೊಳ್ಳುವಲ್ಲಿ ಪೂರ್ವಭಾವಿಯಾಗಿ ಶತಾವಧಾನಿಗಳಿಂದ ರಚಿತ ನಾಯಕಭಾವದ ಗುಣ ಲಕ್ಷಣ ಸಾಹಿತ್ಯ ಅನುಕೂಲತೆಗಳ ಬಗೆಗಿನ ವಿಚಾರಸರಣಿಗಳನ್ನು ನೀಡಿದ್ದೇವೆ. ಹಿಂದಿನ ಸಂಚಿಕೆಯಲ್ಲಿ ಪಾಂಥನೆಂಬ ನಾಯಕನ ಸಾಹಿತ್ಯವನ್ನು ಕಂಡಿದ್ದೀರಿ. ಈ ಸಲದ ಸಂಚಿಕೆಯಲ್ಲಿ ಭಾಮಿನೀಭೀತನು ಇದ್ದಾನೆ. ಇದು ಸಾಂಸ್ಕೃತಿಕ ಪತ್ರಿಕಾಲೋಕದಲ್ಲಿ ಹಿಂದೆಂದೂ ಇಲ್ಲದಂತೆ ನೂಪುರಭ್ರಮರಿಯ ಪಾಲಿಗೆ ಒದಗಿದ್ದು ನಿಜಕ್ಕೂ ಒಂದು ಹೆಮ್ಮೆ ಮತ್ತು ಅಪೂರ್ವ ಅವಕಾಶ. ನಮ್ಮ ಪ್ರಯತ್ನ ನಿಮ್ಮಿಂದ ಸದ್ವಿನಿಯೋಗವಾಗಲಿ...*

## ಭಾಮಿನೀಭೀತ

**ಭಾ**ಮಿನೀಭೀತನು ವಾಸಕಸಜ್ಜಿಕೆಯ ನಾಯಕ. ತನ್ನನ್ನು ಮತ್ತು ತನ್ನ ಕೋಣೆಯನ್ನು ಆಸ್ಥೆಯಿಂದ ಸಿಂಗರಿಸಿಕೊಂಡು ಪ್ರಿಯಕರ/ನಾಯಕನ ಬರುವಿಕೆಗಾಗಿ ನಿರೀಕ್ಷೆ ಹೊಂದಿ ಸಿದ್ಧವಾಗಿರುವ ವಾಸಕಸಜ್ಜಿಕೆಯ ಕಡೆಗೆ ಸಾಗಲಿರುವ ಪ್ರಿಯನಾಗಿದ್ದಾನೆ. ಅತ್ತ ನಾಯಕನೊಂದಿಗೆ ಸಂಗಸುಖದ ಕನಸು ಕಾಣುತ್ತಾ, ಭವಿಷ್ಯವನ್ನು ನೆನೆದು ಸಂತಸ ಹೊಂದುತ್ತಾ ಆಗಾಗ್ಗೆ ನಾಯಕನ ದಾರಿ ನೋಡುತ್ತಾ ಊಟ–ಉಪಚಾರದ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡು ತನ್ನ ನಿರೀಕ್ಷೆಯನ್ನು ಹಲವು ಮಾದರಿಗಳಲ್ಲಿ ವ್ಯಕ್ತಪಡಿಸುವವಳು ವಾಸಕಸಜ್ಜಿಕೆ ಯಾದರೆ; ಇತ್ತ ನಾಯಕನಿಗೆ ತನ್ನ ಚರ್ಯೆಗಳಿಂದಾಗಿ ಅವಳು ಕೋಪಿಸಿಕೊಳ್ಳುವಳೋ ಎಂಬ ಹಿಂಜರಿಕೆ. ಆಕೆಯು ಈತನ ಪಾರದಾರಿಕ–ವೈಶೀಕವೃತ್ತಿಗೆ ಎಲ್ಲಿ ಮುನಿಯುವಳೋ ಎಂದು ಭೀತನಾಗಿದ್ದಾನೆ.



ಈ ಕಾವ್ಯಸಂದರ್ಭದಲ್ಲಿ ನೀಡಲಾದ ನಾಯಕನು ಮಧ್ಯಮಗುಣ, ಧೀರಲಲಿತ ಪ್ರವೃತ್ತಿಯನಾಗಿದ್ದು; ಮನುಷ್ಯ ಸಹಜ ಮಿಶ್ರ ಭಾವನೆಗಳ ಪ್ರತಿರೂಪ ದಂತೆಯೇ ಕಾಣಿಸಿಕೊಳ್ಳುತ್ತಾನೆ. ಈತನು ಬಹು ಯುವತೀ ವಿಶ್ವಾಸಿ; ಆದರೆ ಸಹಜವಾಗಿ ಪ್ರಿಯೆಯಲ್ಲಿ ಅನುರಾಗ ಹೊಂದಿದವನಾಗಿರುವುದರಿಂದ ತನ್ನ ವರ್ತನೆಯಿಂದ ಆಕೆಯ ಮನಸ್ಸಿಗೆ ಖೇದ ಉಂಟುಮಾಡಲೊಲ್ಲನು. ತನ್ನ ಅಂತರಂಗ, ಸ್ವಭಾವಗಳನ್ನು ಬಲ್ಲ ಆಕೆಗೆ ನೆಪಗಳನ್ನು ಹೇಳಲು ಮನಸ್ಸು ಒಪ್ಪದು. ಹಾಗೆಂದು ತನಗಾಗಿ



ಇದಿರುನೋಡುತ್ತಿರುವ ಆಕೆಯನ್ನು ಯಾವ ಬಗೆಯಾಗಿ ಸಮಾಧಾನಿಸುವುದು ಎಂಬ ಚಿಂತೆಯೂ ಈತನನ್ನು ಕಾಡುತ್ತಲಿದೆ. ಆದರೆ ಆಕೆಯ ಸಂಶಯಕ್ಕೆ ಆಸ್ಪದವಾಗದಂತೆ ಇರುವುದಾದರೂ ಹೇಗೆ? ಹೇಗಾದರೂ ಅಧಿಕಾರ ಸಾಧಿಸಿ ಆಕೆಯನ್ನು ಒಪ್ಪಿಸುವುದು ಎಷ್ಟು ಸಮಂಜಸ?–ಎಂಬಿತ್ಯಾದಿ ಯೋಚನೆಗಳು ಈತನನ್ನು ಬಾಧಿಸುತ್ತಿವೆ. ಅದರೊಂದಿಗೆ ವಿಧಾತನು ಯಾಕೆ ಪುರುಷರಲ್ಲಿ ಘಾತುಕತೆಯನ್ನೂ, ಮನೋಹರೆಯರಾದ ಸ್ತ್ರೀಯರಲ್ಲಿ ಈ ಕೋಪ, ರೇಗುವಿಕೆಯನ್ನು ಕೊಟ್ಟನೋ ಎಂದು ಹಲುಬುತ್ತಾನೆ ಕೂಡಾ !

ಇಲ್ಲಿ ರತಿ ಸ್ಥಾಯಿಭಾವ. ನಾಯಕನ ಪ್ರಿಯೆ ಇಲ್ಲಿನ ಆಲಂಬನ ವಿಭಾವ. ಆಕೆಯ ಪ್ರೀತಿ–ಕೋಪ–ನಡವಳಿಕೆ, ಸುತ್ತಮುತ್ತಲ ಪ್ರಕೃತಿ, ಶಕುನ, ವಾಸಸ್ಥಾನಾದಿ ಸನ್ನಿವೇಶಗಳು ಈತನಿಗೆ ಉದ್ದೀಪನ ವಿಭಾವ. ಶಂಕೆ, ಆತಂಕ, ಅಭಿಲಾಷೆ, ಚಿಂತನ, ಅಂಜಿಕೆ, ಮರುಕ, ಕಸಿವಿಸಿ, ಗೊಂದಲ, ಪ್ರಲಾಪ, ಕಳವಳ ಈತನಲ್ಲಿ ಕಂಡುಬರುವ ವ್ಯಭಿಚಾರಿಭಾವಗಳು. ಇಲ್ಲಿನ ಸಾಹಿತ್ಯವು ಕಂದಪದ್ಯದಿಂದ ಪ್ರಾರಂಭವಾಗಿ ನಾಯಕನ ಲಕ್ಷಣಗಳನ್ನು ವ್ಯಾಖ್ಯಾನಿಸುತ್ತದೆ. ನಂತರದ ಲಕ್ಷ್ಯಗೀತೆಯಲ್ಲಿ ನಾಯಕನಿಗೆ ಸಂಬಂಧಿಸಿದ ಉದ್ದೀಪನ ವಿಭಾವಗಳ ಸೂಕ್ಷ್ಮಗಳಿವೆ.

**ರಾಗ : ರೀತಿಗೌಳ ತಾಳ : ಮಿಶ್ರಛಾಪು**

**ವಾಸಕಸಜ್ಜೆಯ ಮನೆಗೆ ವಿ**
**ವಿಲಾಸಿಯೆನಲ್ ತೆರಳಲಿರ್ಪ ಶಂಕಾತಂಕ–**
**ಶ್ವಾಸಂ ಬಹುಯುವತೀ ವಿ**
**ಶ್ವಾಸಂ ನಾಯಕನೆ ಭಾಮಿನೀಭೀತನಿವಂ ॥**

ಕಾದು ನಿಂತವಳೆಡೆ ಹೋಗುವ ತವಕ ।
ಖೇದವ ತರಲೆಂತೆನ್ನುತ ಮರುಕ ॥ಪ॥

ನೆಪಗಳನೊಡ್ಡುತ ನಟಿಸಲಿಕಪ್ಪುದೆ ?
ಸುಪರಿಚಿತವೆ ಎನ್ನಪ್ರವೃತ್ತಿ !
ವಿಪುಲಪ್ರಯಾಸದೆ ಸಜ್ಜಿತೆಯಾಗಿರ–
ಲಪರಿಸುವುದೆಂತುಚಿತಕೃತಿ ? ॥ 1 ॥

ಆಕೆಯ ಸಂಶಯಕಾಸ್ಪದವಾಗದೆ
ನೈಕಬಹೂಕ್ತಿ ಸಲ್ಲಿಸಲೇ?
ಪ್ರಾಕೃತರಂತಧಿಕಾರವ ಸಾಧಿಸಿ
ಸ್ವೀಕೃತಿಯೇ ಕೃಪೆಯೆನ್ನಿಸಲೇ ? ॥ 2 ॥

ಧಾತನೇತಕೆ ಪುರುಷರಲ್ಲೀ
ಘಾತುಕತೆಯನ್ನಿಟ್ಟನೋ ।
ಮಾತದಿರ್ಕೆ, ಮನೋಹರೆಯರ–
ಲ್ಲೇತಕೀ ಖತಿ ನೆಟ್ಟನೋ ? ॥ 3 ॥

## ದೀವಟಿಗೆ

(ಅರ್ಥಗರ್ಭಿತವೆನಿಸಿದ, ವಿಮರ್ಶೆಗೆ ಔಚಿತ್ಯವೆನಿಸುವ, ಗುಣಮಟ್ಟದ ಕಾರ್ಯಕ್ರಮಗಳ ಸಾಧ್ಯಾಸಾಧ್ಯತೆಗಳ ಬಗೆಗೊಂದು ಝಲಕ್. ಚಿಕ್ಕ, ಚೊಕ್ಕ, ಅಚ್ಚುಕಟ್ಟು, ಅರ್ಥಪೂರ್ಣ, ಪೂರ್ವಾಗ್ರಹ-ಕ್ಲೀಷೆ- ಸ್ಥಾನಬೇಧ ರಹಿತ ವರದಿಯೆನಿಸದ ಔಚಿತ್ಯಪೂರ್ಣ ವಿಮರ್ಶೆಗಳಿಗೆ ಸದಾ ಸ್ವಾಗತವಿದೆ. ಅಂತೆಯೇ ಗುಣಮಟ್ಟದ ಯೋಜನೆಗಳು, ಕಾರ್ಯಕ್ರಮಗಳ ಬಗೆಗೂ ನೀವು ಬೆಳಕು ಬೀರಬಹುದು. ಬರೆಯುವವರಿಗೆ ವಯಸ್ಸು-ಸ್ಥಾನ-ಪ್ರದೇಶದ ಪರಿಮಿತಿಯಿರುವುದಿಲ್ಲ. ವಿಮರ್ಶಾ ಕ್ಷೇತ್ರದ ಗುಣಮಟ್ಟ ಕುಸಿಯುತ್ತಿರುವ ಮಧ್ಯೆಯೂ ಉತ್ತಮ ವಿಮರ್ಶೆಗಳನ್ನು ರೂಢಿ ಮಾಡಿಸುವುದಷ್ಟೇ ನೂಪುರದ ಗುರಿ. ಆ ಮೂಲಕ ನರ್ತನದ ನಡೆಗಳಿಗೆ ದೀವಟಿಗೆಯಾಗಬಲ್ಲುದು ಎಂಬುದು ನಮ್ಮ ಆಶಯ. ಹೀಗೆ ವಿಮರ್ಶೆಯನ್ನು ನೀಡುವವರನ್ನು ವಾರ್ಷಿಕ ವಿಮರ್ಶಾ ಪ್ರಶಸ್ತಿಯ ನಾಮನಿರ್ದೇಶನಕ್ಕೆ ಪರಿಗಣಿಸಲಾಗುವುದು.)

**ಡಾ. ಪ್ರಭಾಕರ ಜೋಷಿ- ಯಕ್ಷಗಾನದ ಚಿಂತಕರಾಗಿ, ಲೇಖಕರಾಗಿ, ಸಂಶೋಧಕರಾಗಿ, ಅರ್ಥಧಾರಿಯಾಗಿ, ವಿಮರ್ಶಕರಾಗಿ ಸಾರಸ್ವತ ವಲಯದಲ್ಲಿ ಖ್ಯಾತನಾಮರು. ತೆಂಕುತಿಟ್ಟು ಯಕ್ಷಗಾನ ವಿದ್ವತ್-ವಿಚಾರ ಸಭೆಗಳಲ್ಲಿ ಅವರಿಲ್ಲದಿದ್ದರೆ ಕಾರ್ಯಕ್ರಮದ ಗುಣಮಟ್ಟದ ಬಗೆಗೇ ಸಂದೇಹಪಡಬಹುದಾದಂತಹ ಅಪ್ರತಿಮ ವಿದ್ವತ್-ವಾಕ್ ಸರಣಿ ಅವರದ್ದು. ಯಕ್ಷಗಾನದ ಕುರಿತ ಮಾತುಕತೆಗಳಿಗೆ ದಿಕ್ಸೂಚಿಯಾಗಬಲ್ಲ ಅವರ ಭಾಷಾವೈಖರಿ, ಪ್ರೌಢಿಮೆ ಅನುಪಮ, ಅತ್ಯಪೂರ್ವ. ನೂಪುರ ಭ್ರಮರಿಯ ಪ್ರಾರಂಭದ ದಿನಗಳಿಂದಲೂ ಜೋಷಿಯವರ ಬೆಂಬಲ, ಹಾರೈಕೆ ಅವರ ಬರೆವಣಿಗೆಗಳ ರೂಪದಲ್ಲಿ ನಮ್ಮನ್ನು ಹರಸುತ್ತಾ ಬಂದಿದೆ. ಪತ್ರಿಕೆಯ ಗುಣಮಟ್ಟದ ಬಗ್ಗೆ ಅವರಿಗಿರುವ ಆಸ್ಥೆ ಹಲವು ಬಾರಿ ನಮ್ಮ ಯೋಚನೆಗಳನ್ನು ಚಿಂತನೆಗಳನ್ನಾಗಿಸಿ ಪ್ರೇರೇಪಿಸುವಲ್ಲಿ ಮುನ್ನಡೆಸಿದೆ. ಈ ಸಲ ಎರಡು ನೂತನ ನರ್ತನಸಂಬಂಧಿತ ಪುಸ್ತಕಗಳ ಬಗ್ಗೆ ಅವರು ಬೆಳಕು ಚೆಲ್ಲಿದ್ದಾರೆ.**

### 'ಉ.ಮಾ' ಗೀತರೂಪಕಗಳು

**ಲೇಖಕರು : ಉದ್ಯಾವರ ಮಾಧವಾಚಾರ್ಯರ ಗೀತರೂಪಕಗಳು**

**ಸಂಪಾದಕ : ಬೆಳಗೋಡು ರಮೇಶ ಭಟ್.**

**ಶ್ರೀನಿವಾಸ ಪುಸ್ತಕ ಪ್ರಕಾಶನ ಬಸವನಗುಡಿ, ಬೆಂಗಳೂರು -4,**

**ಪುಟ 354, ರೂ. 180.**

ಕನ್ನಡದ ಪ್ರಮುಖ ರಂಗಚಿಂತಕ, ಕತೆಗಾರ, ನಿರ್ದೇಶಕ, ವಿಮರ್ಶಕ ಪ್ರೊ. ಉದ್ಯಾವರ ಮಾಧವಾಚಾರ್ಯರ 20 ಗೀತ ನೃತ್ಯರೂಪಕಗಳ ಸಂಕಲನ ಹೊರಬರುತ್ತಿರುವುದು ಕನ್ನಡದ ರಂಗಸಾಹಿತ್ಯದಲ್ಲೊಂದು ದೊಡ್ಡ ಘಟನೆ. ಕಳೆದ ಮೂರು ದಶಕಗಳಿಂದ ನೃತ್ಯರಂಗದಲ್ಲಿ, ನಾಟಕಗಳಲ್ಲಿ ಪ್ರೊ.ಉದ್ಯಾವರರು ತುಂಬ ವಿಶಿಷ್ಟವಾದ ಕಲ್ಪನಾಶೀಲವಾದ ಪ್ರಯೋಗಗಳನ್ನು ಮಾಡುತ್ತಾಬಂದವರು. ಅಷ್ಟಾಗಿ ಗಮನಿಸಲ್ಪಡದ ದೊಡ್ಡ ರಂಗ ಅಭಿಯಾನ ಅವರದು.

ಇಲ್ಲಿ-ನೃತ್ಯಗೋಪಾಲ, ಭಾವನೃತ್ಯನಮನ, ಚಿಣ್ಣರಕೃಷ್ಣ, ಯಕ್ಷಬಾಲಲೀಲೆ, ಸೀತೆಯ ಸ್ವಗತ, ವಲ್ಮೀಕ ನಿನಾದ, ನೃತ್ಯವ್ಯಾಸ, ಅಂಬೆ, ಗಾಂಧಾರಿ, ಪಾಂಚಾಲಿ, ಭೀಷ್ಮ ಸತ್ಯವ್ರತನಾದದ್ದು, ದಾಕ್ಷಾಯಿಣಿ, ಹಂಸನಾದ, ಶಕುಂತಕೂಜನ, ಕುವರ ಭಸ್ಮಾಸುರ, ಉಪನಿಷದುದ್ಯಾನಂ, ಪೂರ್ಣಪುರುಷ, ಗಂಗಾಲಹರಿ, ಸ್ತ್ರೀಶಕ್ತಿ, ಜ್ವಾಲೆ –ಈ ಇಪ್ಪತ್ತು ರಚನೆಗಳಿವೆ. ಬಹಳಷ್ಟು ಹೆಸರುಗಳೇ ಸೂಚಕ ರಚನೆಗಳು.

ನಾವೀನ್ಯ ಮತ್ತು ಸಾಧ್ಯತೆಗಳ ನಿರತ ಶೋಧ, ಯಕ್ಷಗಾನ ಮಾಧ್ಯಮದ ಕಲಾತ್ಮಕವಾದ ಅನ್ವಯ, ಅಸಾಧಾರಣ ಚಿತ್ರಕ ಶಕ್ತಿ, ನೃತ್ಯ ಗಾನಾನುಕೂಲ ಪದರಚನೆ, ಅಸಾಮಾನ್ಯ ಪಾತ್ರಸ್ಪಂದನ ಚಿತ್ರಣ, ರಂಗಮಾಧ್ಯಮದ ಓತಪ್ರೋತ ಹಾಸುಹೊಕ್ಕು, ಕಲ್ಪನೆಗಳಲ್ಲಿ ಎತ್ತರದ ಕವಿ ಮಾಧವಾಚಾರ್ಯ.

ನೃತ್ಯಾನುಕೂಲಿ ಸಾಹಿತ್ಯರಚನೆಯಲ್ಲಿ ಪ್ರಾಯಃ ಕನ್ನಡದ ಬೆರಳೆಣಿಕೆಯ ಪಂಕ್ತಿಯವರು. ಈ ಮಾತುಗಳಿಗೆ ಈ ಸಂಕಲನದ ಪುಟಪುಟದಲ್ಲಿ ದೃಷ್ಟಾಂತಗಳಿವೆ. ಉಪನಿಷತ್ತುಗಳಂತಹ ಶುಷ್ಕವೆನ್ನುವ ವಸ್ತುವು ರಂಗಸಾಹಿತ್ಯಕ್ಕೆ ಅಳವಡುವ ಇಂದ್ರಜಾಲ ಆಚಾರ್ಯರ ಕಲ್ಪನೆಯ ಸಿರಿಮನೆಯ ಅಪೂರ್ವನಾದ. ಪುರುಷಸೂಕ್ತ, ಸ್ತ್ರೀಸೂಕ್ತಗಳನ್ನು ನರ್ತನಕ್ಕೆ ಒಗ್ಗಿಸಿ ಬೆಳೆಸಿ ಕಾಣಿಸಿದ್ದು ಅವರ ಶ್ರೇಷ್ಠ ಪ್ರತಿಭೆ. ಇಲ್ಲಿ ಉದ್ಯಾವರರು ಕನಸುಗಾರ, ನಿರ್ದೇಶಕ, ಕವಿ–ಒಟ್ಟೊಟ್ಟಿಗೆ ಆಗುತ್ತಾರೆ.

ಕೃಷ್ಣ ಮಾಧವಾಚಾರ್ಯರ ನೆಚ್ಚಿನ ನಾಯಕ. ಹಾಗೆಯೇ ರಾಮಾಯಣ ಭಾರತಗಳ ಸ್ತ್ರೀಪಾತ್ರಗಳೂ ಕೂಡಾ ಅವರಿಗೆ ಆಪ್ತ. ಈ ಸಂಕಲನದಲ್ಲಿ ಪಾಂಚಾಲಿ, ನೃತ್ಯಗೋಕುಲ, ವಲ್ಮೀಕನಿನಾದ, ಉಪನಿಷದುದ್ಯಾನಂ –ಅತ್ಯುತ್ತಮ ರಚನೆಗಳು.

ಸೂಚ್ಯತೆಯ ಸಮರ್ಥಕವಿ ಒಮ್ಮೊಮ್ಮೆ ಅತಿವಾಚ್ಯತೆಗೇಕೆ ಇಳಿಯುತ್ತಾರೋ ತಿಳಿಯದು. (ಬಹುಶಃ ರಂಗ ರಚನೆಯಿಂದ ಇರಬಹುದು.) ಆಚಾರ್ಯರ ಛಂದೋವಿಧಾನ ಅಷ್ಟು ಅಚ್ಚುಕಟ್ಟಲ್ಲ. ಆದರೆ ಹಾಡಲು ಸುಲಲಿತ. ಮಾಧವಾಚಾರ್ಯರ ರಚನೆಗಳ ಆಹ್ವಾನವನ್ನು ನಮ್ಮ ನರ್ತಕರು ಸ್ವೀಕರಿಸಿ ಸಾಕಾರ ಗೊಳಿಸಬೇಕು.

## ಮೌಖಿಕ ಕಲೆಯಲ್ಲಿ ಸಾಹಿತ್ಯಸೌಂದರ್ಯ

**ಲೇಖಕರು : ಡಾ ವಿಜಯನಳಿನಿ ರಮೇಶ,ಶಿರಸಿ.**

**ಪ್ರಕಾಶಕರು : ಪ್ರಸಾರಾಂಗ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.**

**ಪುಟ 128, ರೂ.60.**

ಅಧ್ಯಾಪಿಕೆ, ಕಲಾವಿದೆ, ಸಂಶೋಧಕಿ, ನಿರ್ದೇಶಕಿಯಾಗಿ ದಶಕಗಳಿಂದ ಸಕ್ರಿಯರಾಗಿರುವ ಡಾ. ವಿಜಯನಳಿನಿ ರಮೇಶ ಶಿರಸಿ ಅವರು ತಾಳಮದ್ದಲೆ ಕುರಿತು ಒಳ್ಳೆಯ ಗುಣಮಟ್ಟದ ಸಂಶೋಧನೆಯ ಪಿಎಚ್‌ಡಿ ಪಡೆದ ಹೆಗ್ಗಳಿಕೆ ಉಳ್ಳವರು. ಅವರ ಹದಿನಾರು ವಿಮರ್ಶ ಪ್ರಬಂಧಗಳು ಇಲ್ಲಿದ್ದು ; ಮುಖ್ಯವಾಗಿ ಯಕ್ಷಗಾನದ ಸಾಹಿತ್ಯವಿಲಾಸ, ಯಕ್ಷಗಾನದಲ್ಲಿ ಸ್ತ್ರೀಧ್ವನಿ ಕುರಿತ ಅಂಕಣಗಳಿದ್ದು; ಯುಗಧರ್ಮ, ಹಿಮ್ಮೇಳಗಳ ಕುರಿತು ಆಲೋಚನೆಗಳಿವೆ. ವಿವಿಧ ಸಂದರ್ಭಗಳಿಗಾಗಿ ಬರೆದ ಬಿಡಿಬರೆಹಗಳಾಗಿರುವುದರಿಂದ ಸಂಕ್ಷೇಪವೂ, ಪುನರಾವರ್ತನೆಗಳೂ ಬರುವುದು ಸಹಜ. ಮೌಖಿಕತೆಯಲ್ಲಿ ಸಾಹಿತ್ಯ ಸೌಂದರ್ಯ, ಜಾಗರವೆಂ ಬ ಜಾಗೃತ ಕಲೆ, ತಾಳಮದ್ದಳೆ ಪ್ರಸಂಗಕೃತಿ, ಪ್ರಯೋಗಕೃತಿ, ಸ್ತ್ರೀಪಾತ್ರ, ಮಾತಿನ ಕಲಾತ್ಮಕತೆ, ಪ್ರೇಕ್ಷಕ ವಿಚಾರ ಮೊದಲಾದ ವಿಚಾರಗಳನ್ನು ಕುರಿತ ಇವರ ಪ್ರಬಂಧಗಳಲ್ಲಿ ನಾವೀನ್ಯವಿದೆ. ಈವರೆಗೆ ವಿಮರ್ಶೆಗಳಲ್ಲಿ ಅಷ್ಟಾಗಿ ಬಾರದ ವಸ್ತು ಮತ್ತು ವಿಶ್ಲೇಷಣಾ ವಿಧಾನಗಳಿವೆ. ಪರಿಚಯ, ವಿಮರ್ಶೆ ಎರಡನ್ನೂ ಒಟ್ಟಾಗಿ ಸಂವಹನ ಮಾಡುವ ಈ ಬಗೆಯ ಬರೆವಣಿಗೆ ಅತ್ಯಗತ್ಯವಾದದು. ಡಾ.ಶಿವರಾಮ ಕಾರಂತರು ಮತ್ತು ಯಕ್ಷಗಾನ ಎಂಬ ಅವರ ಪ್ರಬಂಧದಲ್ಲೂ ಹಲವರು ವಿವೇಚಿಸಿದ ಒಂದು ವಿಚಾರದಲ್ಲೂ ಹೊಸತಾಗಿ ಹೇಳಲು ಸಾಧ್ಯ ಎಂಬುದನ್ನು ತೋರಿಸಿದ್ದಾರೆ.

ಸ್ವತಃ ರಂಗದಲ್ಲಿ ಪ್ರಯೋಗದ ಅನುಭವ ಮತ್ತು ರಂಗದೊಡನೆ ಒಡನಾಟ, ಜತೆಗೆ ವಿಮರ್ಶಕರ ಅಂತರ ಇವನ್ನು ಪ್ರಬಂಧಗಳು ಮೇಳೈಸಿವೆ. ಕೃತಿಯ ಆಶಯ, ಆಕೃತಿ, ಶೈಲಿಗಳ ಕುರಿತು ಗಂಭೀರವಾಗಿ ಚರ್ಚಿಸುವ ಪ್ರೊ. ವಿಜಯನಳಿನಿ ಅವರದ್ದು– ಯಕ್ಷಗಾನ ವಿಮರ್ಶಾಕ್ಷೇತ್ರಕ್ಕೆ ಬಲು ಸಶಕ್ತವಾದ ಸೇರ್ಪಡೆ. ಬರಹಗಳಲ್ಲಿ ಕೆಲವೆಡೆ ಅವಸರವಿದೆ. ವಿಚಾರೋಲ್ಲೇಖಗಳು ಬೇಕೆನಿಸುತ್ತದೆ. ಈ ಸಂಕಲನವು ಯಕ್ಷಗಾನ ವಿಮರ್ಶೆಯ ಬಹುಮುಖೀ ವಿಸ್ತರಣದ ಒಂದು ದಾಖಲಾತಿಯಾಗಿದ್ದು ಕಲಾವಿದರು, ಕಲಾಸಕ್ತರು ಇಲ್ಲಿಯ ವಿಚಾರಗಳನ್ನು ಗಂಭೀರವಾಗಿ ಗ್ರಹಿಸಿ ಚರ್ಚಿಸಿ ಬೆಳೆಸಬೇಕು. ■

ದೀವಟಿಗೆ

# ಪ್ರತಿರಾಗ ರಸೋದಯದ 'ಶತಮಾನದ ಸಂಗೀತ'

– ವಿದ್ವಾನ್ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, ಬೆಂಗಳೂರು

**12**–12–12 ಶತಮಾನದ ಸ್ಮರಣೀಯ ದಿನ. ವಿಶ್ವದ ಎಲ್ಲೆಡೆ ವಿಲಾಸದಿಂದಲೋ, ವಿಹಾರದಿಂದಲೋ, ವಿವೇಕದಿಂದಲೋ, ಈ ದಿನವನ್ನು ಸಮಾಚರಿಸಲಾಗಿದೆ. 12–12–12ರ ಅಂಕವೈಶಿಷ್ಟ್ಯವೂ ಗಮನಾರ್ಹ. ಮೂರು ಹನ್ನೆರಡನ್ನು ಕೂಡಿಸಿದರೂ, ಗುಣಿಸಿದರೂ, ಫಲಿತಾಂಕದ ಒಟ್ಟು ಮೊತ್ತ ಒಂಬತ್ತೇ. ಅದು ನವ. ಆ ನವವನ್ನೂ ನವೆಯಾಗಿಸದೆ ನವೋನವಗೊಳಿಸುವ ಸುಸಂಸ್ಕೃತ ಭಾರತೀಯ ವಿಧಾನದ ಮಕುಟಮಣಿಯಾಗಿ ಮೂಡಿದ್ದು 'ದ್ವಾದಶಸ್ವರಸಂಭ್ರಮ'. 'ಶೋಭಿಲ್ಲು ಸಪ್ತಸ್ವರ' ಎಂದು ತ್ಯಾಗರಾಜರು ಸಂಸ್ತುತಿಸಿದ್ದು ಸಂಗೀತಸಪ್ತಕಸಾಮ್ರಾಜ್ಯದ ಮಹಾದ್ವಾರದ ದಿವ್ಯದೇಹಲಿಯಲ್ಲಿ(ಹೊಸ್ತಿಲು). ಅಲ್ಲಿಂದ ಒಳಹೊಕ್ಕರೆ ಕಿವಿಗೆ ಕಾಣುವುದೇ ದ್ವಾದಶಸ್ವರಸಂಭ್ರಮ. ಯಥಾರ್ಥಕ್ಕೂ ಅದು ಸಂ–ಭ್ರಮವೇ. ಕಲೆಯ ಮೂಲಲಕ್ಷಣವೇ ಭ್ರಮಾವರಣ ಪರಿನಿರ್ಮಾಣದ ಮೂಲಕ ರಸಾನಂದದ ಅಮೃತವರ್ಷಣ.

12–12–12ರ ಆ ದಿನ ಬೆಂಗಳೂರಿನ ಚೌಡಯ್ಯ ಹಾಲ್‌ನಲ್ಲಿ ಸಮಾಹಿತಸಂಧ್ಯೆಯಲ್ಲಿ ಸಂಸರ್ಗಗೊಂಡದ್ದೂ ದ್ವಾದಶಸ್ವರಸಂಗೀತಾಮೃತವರ್ಷಣವೇ. 'ಏನಿದೀ ಪ್ರವಾಹವೋ' ಎಂದು ಬೆರಳು ಬಾಯಾಗಿ, ಬಿರಿಗಣ್ಣಾಗಿ, ಏರುಹುಬ್ಬಾಗಿ ಉದ್ಗರಿಸುವಂತೆ ಗರಿಗೆದರಿ ಉಡ್ಡಯಿಸಿದ– ಸಂಗೀತ ಸುಪರ್ಣ ( ಗರುಡ) ಸ್ವಚ್ಛಂದವಾಗಿ ಸಭಾಂಗಣದ ರಸಿಕಾವಕಾಶದಲ್ಲಿ. ಧಾರಿಣಿಯ ದೃಢತೆ, ನೀರಿನ ಸೆಳವು, ಬೆಂಕಿಯ ಬಿಸುಪು, ಗಾಳಿಯ ತಣ್ಪು, ಆಗಸದ ಹರಹು ; ಎಲ್ಲವೂ ಹೆಣೆದು ಹರಳುಗಟ್ಟಿದಂತೆ 12–12–12ರ ಪರ್ವದಿನದಂದು ಸುಮುಹೂರ್ತದಲ್ಲಿ ಚೌಡಯ್ಯಸಭಾವೇದಿಯಲ್ಲಿ ಮೈಗಾಣಿಸಿಕೊಂಡವು ; ಸಂಗೀತ ಶರೀರದಲ್ಲಿ.

ಡಿಸೆಂಬರ್ 12 ಪ್ರಲಯದ ಕಾಲ; ಜೋಯಿಸರ ಕವಣೆಗಾಣ್ಕೆಯ ಪ್ರಕಾರ. ಪ್ರಪಂಚದ ಯಾವುದೋ ಮೂಲೆಯಲ್ಲಿ ಪ್ರಲಯ ಆಗುತ್ತದೋ ಇಲ್ಲವೋ, ಆದರೆ ಚೌಡಯ್ಯ ಸಭಾಗೃಹದಲ್ಲಿ ಭವಿಷ್ಯವಾದಿಗಳ ಹಾರುಮಾತು ನೂರಕ್ಕೆ ನೂರು ಸತ್ಯವಾಗಿ ಪರಿಣಮಿಸಿದ್ದು ಇದೀಗ ಇತಿಹಾಸ. ಸಾವಿರಕ್ಕೂ ಮಿಕ್ಕಿ ಇಡಿಕಿರಿದ ಕೇಳುಗರ ಪಾಲಿಗೆ ಅಲ್ಲಿ ಕಾಲ ಲಯವಾಗಿತ್ತು; ದೇಶ ಲಯವಾಗಿತ್ತು, ಮನಸ್ಸೂ ಲಯವಾಗಿತ್ತು. ಸಂಗೀತವೆಂಬ ಕಾಲಮೇಘ ರಾಗವೆಂಬ ಆಲಿಗಲ್ಲುಗಳನ್ನು ಸ್ವರವೆಂಬ ಹೆಬ್ಬನಿಗಳನ್ನು ತಡೆಯಿಲ್ಲದೆ ಭೋರೆಂದು ಸುರಿಸಿ ಅಕ್ಷರಶಃ ಪ್ರಲಯವನ್ನೇ ಸೃಷ್ಟಿಸಿತ್ತು. ಲೀಯತೇ ಇತಿ ಲಯಃ – ಇದು ಲಯಶಬ್ದದ ಅಸಲೀ ಅರ್ಥ; ಅಂದರೆ ಕರಗುವಿಕೆ. ಕರಗುವುದರಲ್ಲಿ ಅಹಂಕಾರಕ್ಕೆ ತಾವಿಲ್ಲ, ಠಾವಿಲ್ಲ. ಕರಗುವುದರಲ್ಲಿ ಸಂತೋಷದ್ದೊಂದೇ ಸನ್ನಿಧಾನ. ಆನಂದದ್ದೊಂದೇ ಆಯತನ. ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ಮಿಡಿವ ಮಧುರಾನುಭೂತಿಗೆ ಕಾರಣೀಭೂತವಾದುದು 'ದ್ವಾದಶಸ್ವರಸಂಭ್ರಮ' ಎಂಬ ಅನ್ಯಾದೃಶ್ಯವಾದ ಸಾಂಗೀತಿಕ ಕಾರ್ಯಕ್ರಮ, ಮೆ। ಕಾಮತ್ ಅಂಡ್ ಕಾಮತ್ ಸಹಯೋಗದಲ್ಲಿ ಬಿಜಾಪುರೆ ಹಾರ್ಮೋನಿಯಂ ಫೌಂಡೇಶನ್ ಪ್ರಸ್ತುತಪಡಿಸಿದ ಪರಿಣಾಮರಮಣೀಯವಾದ ಸ್ವರರಾಗಸುಧಾರಸಧಾರೆ.

ಈ ವಿಶಿಷ್ಟ ಕಾರ್ಯಕ್ರಮದ ಕಲ್ಪನೆ, ರೂಪಣೆ, ಯೋಜನೆ, ಸಂಘಟನೆಗಳ ಮತಿಮಾತೃಕೆ ಡಾ। ರವೀಂದ್ರ ಕಾಟೋಟಿ. ಹಾರ್ಮೋನಿಯಂ ಅಥವಾ ಸಂವಾದಿನೀವಾದನದಲ್ಲಿ ತನ್ನನ್ನು ಏಕೀಕರಿಸಿಕೊಂಡು ತಮ್ಮ ಗುರು ವಾದನವಿರಿಂಚಿ ಪಂಡಿತ್ ರಾಮಭಾವು ಬಿಜಾಪುರೆಯವರ



**ಪ್ರವೀಣ್ ಗೋಡ್ಖಿಂಡಿ, ಶತಾವಧಾನಿ ಡಾ. ಆರ್. ಗಣೇಶ್‌ರೊಂದಿಗೆ ಡಾ. ರವೀಂದ್ರ ಕಾಟೋಟಿ**

ಶ್ರದ್ಧಾಸ್ಮೃತಿಯಲ್ಲಿ ನಿರಂತರ ಸಂಗೀತದ ರಸಾನ್ನವನ್ನು ರಸಿಕರಿಗೆ ಉಣಬಡಿಸುವ ರವೀಂದ್ರ ಕಾಟೋಟಿ 12-12-12ನ್ನು ಶತಮಾನದ ಕ್ಷಣವಾಗಿ ಹಿಡಿದಿಡಬೇಕೆಂದು ಸಂಕಲ್ಪಿಸಿದ್ದರ ಫಲಿತವೇ 'ದ್ವಾದಶ' 'ಸ್ವರ' ಸಂಭ್ರಮ'.

ಸಂಗೀತ ಕಾರ್ಯಕ್ರಮವೆಂದರೆ ಒಂದಷ್ಟು ನುಡಿತ, ಬಡಿತ, ಹಾಡು ಜಾಡೆಂಬ ಜಾಳು ಹಾದಿ ಹಿಡಿಯದೇ, ಎಲ್ಲ ದೃಷ್ಟಿಯಿಂದಲೂ ಶತಮಾನದ ದಾಖಲೆಯನಾಗಿಸಿದ್ದು 'ದ್ವಾದಶ'ದ ಹಿರಿಮೆ ಗರಿಮೆ. ಕಾರ್ಯಕ್ರಮದ ನಿರೂಪಕರಾದ ಶತಾವಧಾನಿ ಡಾ. ಆರ್. ಗಣೇಶ ಉಲ್ಲೇಖಿಸಿದಂತೆ, ಕೋಗಿಲೆಯು ಪಂಚಮಸ್ವರವನ್ನು ಸಾಧಿಸುವುದಕ್ಕೆ ಎಷ್ಟು ಶತಮಾನಗಳ ಕಾಲ ರೆಕ್ಕೆಗಳನ್ನು ಕಳಕೊಂಡಿದೆಯೋ (ಪುತಿನ ಅವರ ಪದ್ಯ)! ಒಂದೊಂದು ಸ್ವರವನ್ನೂ ಹಿಡಿದು ನಿಲ್ಲಿಸಲು, ಕಟೆಯಲು ಎಷ್ಟು ಸಾಧಕರ ಶಾರೀರ ಚಾಣದ ಪೆಟ್ಟಿಗೆ ಜರ್ಜರಿತವಾಗಿದೆಯೋ ! ಭಾರತೀಯ ಸಂಗೀತವಂತೂ ನಿರಂತರ ತಪಃಪ್ರವಾಹ. ಪ್ರವಾಹದಲ್ಲಿ ಲೀನವಾದ ತಲ್ಲೀನವಾದ ಚೇತನಕ್ಕೆ ಸ್ವಂತ ವ್ಯಕ್ತಿತ್ವವಿಲ್ಲ. ಅಂತಹ ಸಹಸ್ರಾವಧಿ ತಪಶ್ಚೇತನದ ಪ್ರತಿಭಾಫಲವನ್ನು ನಾವೀಗ ಯಾವುದೇ ಈತಿಬಾಧೆಗಳಿಲ್ಲದೆ ಬಿಂದಾಸಾಗಿ ಬಳಸಿಕೊಳ್ಳುತ್ತಿದ್ದೇವೆ, ಬಜಾಯಿಸಿಕೊಳ್ಳುತ್ತಿದ್ದೇವೆ, ಬೀಗುತ್ತಿದ್ದೇವೆ, ಕೆನೆಯುತ್ತಿದ್ದೇವೆ, ಕಮಾಯಿಸುತ್ತಿದ್ದೇವೆ. ಆದರೆ ಆ ಸಂಗೀತಾರ್ಷಪರಂಪರೆಯ ದಧೀಚಿಗಳ ಋಣಸಂದಾಯದ ದಾರಿ ಯಾವುದು? 'ಕೃತಜ್ಞತೆ' ಎಂಬುದು ಭಾರತೀಯ ಸಂಸ್ಕೃತಿಯ ಮೌಲ್ಯ, ಮುಖ್ಯ ಲಕ್ಷಣ. ಅಂತರ್ಬಹಿಶ್ಚ ಕೃತಜ್ಞರಾಗಿರಬೇಕಾದ್ದು ಮನುಷ್ಯ ಕನಿಷ್ಠ ಕರ್ತವ್ಯ. ಅದನ್ನು ನೆನಪಿಟ್ಟು ಸಲ್ಲಿಸುವುದರಲ್ಲಿ ಕಾಟೋಟಿ ಕೈಂಕರ್ಯಕ್ಕೆ ಕೈಹಚ್ಚಿದ್ದಾರೆ 'ದ್ವಾದಶ'ದಲ್ಲಿ. ಹನ್ನೆರಡು ಸ್ವರಗಳನ್ನು ಪ್ರತಿನಿಧಿಸಿದ ಹನ್ನೆರಡು ರಾಗಗಳನ್ನು ಆಯಾ ರಾಗನಿರ್ವಹಣದಲ್ಲಿ ನೀಲಕಂಠ(ಈಶ್ವರ)ರೆನಿಸಿಕೊಂಡ ರಾಗರ್ಷಿಗಳಿಗೆ ಅರ್ಪಿಸಿ ಪರಂಪರೆಯನ್ನು ಧನ್ಯವಾಗಿಸಿದ್ದಾರೆ.

ರವೀಂದ್ರ ಕಾಟೋಟಿಯವರು 'ದ್ವಾದಶ'ದಲ್ಲಿ ಗಾಳಿಯಲ್ಲಿ ಕೈಯಾಡಿಸಿ ಗುಂಬಳವನ್ನು ಸೃಷ್ಟಿಸಿದ್ದೂ ಅಲ್ಲ; ತೋರಿಸಿದ್ದೂ ಅಲ್ಲ. ಸಂಗೀತಕಲಾಭೂಮಿಯಲ್ಲಿ ಹೊಸತಳಿಯನ್ನು ತಯಾರಿಸಲು ತೆರಪಿಲ್ಲದಷ್ಟು ಹಿಂದಿನ ಹಿರಿಯರು ಮಾಡಿದ ಕೃಷಿಸಂತಾನವೇ ಗೋದಾಮಿನಲ್ಲಿ ಜಮಾಯಿಸಿದ್ದೇ ಇದೆಯಲ್ಲ ! ಅದರ ವಿನಿಯೋಗ ಅಷ್ಟಿಷ್ಟು ಆದರೆ ಅದೇ ಭಾಗ್ಯ. ಹಿಡಿಯಲ್ಲಿರುವುದನ್ನು ಒಪ್ಪವಾಗಿ ಓರಣಗೊಳಿಸಿದ್ದು ಕಾಟೋಟಿ ಕಾಯಕ. ಅದೊಂದು ಕುಸುರಿಕೆಲಸ. ಅದನ್ನು ಅಂದಗೊಳಿಸಿ ಅಂದಣವೇರಿಸಲು ಕುಶಲ ಕಲೆಗಾರರನ್ನು ಕಲೆಹಾಕಿ ಚೌಕಟ್ಟಿಗೊಳಪಡಿಸಿ ಕಣ್ಣಾಪಿನಲ್ಲಿ ಕೈವಾರಿಸಿದ್ದು ಕಾಟೋಟಿ.

ದ್ವಾದಶ 'ಸ್ವರ' ಸಂಭ್ರಮದ ಕಲ್ಪನೆ ಕಮನೀಯವಾದುದು ಸ,ಪ-ಪ್ರಕೃತಿಸ್ವರದ ಜೊತೆಗೆ ಕೋಮಲ ಶುದ್ಧರೂಪದ ರಿಗಮಧನಿಯ ಐದು ವಿಕೃತಿ ಸ್ವರಗಳು. ಒಟ್ಟು ಹನ್ನೆರಡು ಸ್ವರ ಪ್ರತಿಯೊಂದು ರಾಗಕ್ಕೂ ಜೀವಸ್ವರವಾಗಿ ಇದ್ದೇ ಇರುತ್ತದೆಯಷ್ಟೇ ! ಅದನ್ನೇ ಜೀವಾಳವಾಗಿ ಮಾಡಿಕೊಂಡು ಹನ್ನೆರಡೂ ಸ್ವರಗಳ ಜೀವರಾಗವನ್ನು ಹೆಕ್ಕಿ 'ದ್ವಾದಶ'ವನ್ನು ನೇಯಲಾಗಿತ್ತು. ಪ್ರತಿಯೊಂದು ರಾಗವನ್ನೂ ಪ್ರಾತಃಸ್ಮರಣೀಯರಾದ ಸಾಧಕಮನೀಷಿಗಳಿಗೆ ಅರ್ಪಿಸಲಾಗಿತ್ತು. ರಾಗನಿರ್ವಹಣೆಯನ್ನು ಗಾಯನ ಹಾಗು ವಾದನ ಎರಡರಲ್ಲೂ ಒಂಟಿಯಾಗಿಯೂ, ಜಂಟಿಯಾಗಿಯೂ ಯೋಜಿಸಲಾಗಿತ್ತು. ಇದರಿಂದ ಆಯಾ ಕಲಾವಿದರಿಗೆ ಸ್ವತಂತ್ರಕೌಶಲಕ್ಕೂ ಮುಕ್ತ ಅವಕಾಶ ಲಭಿಸಿ ರಸಿಕರ ಆಸ್ವಾದದ ಮಿರುಪು ಹುರುಪು ಹೆಚ್ಚಿತು.

ಸ್ವರ-ರಾಗ-ಅರ್ಪಣದ ಅನುಕ್ರಮ ಹೀಗಿತ್ತು.

1. ಕೋಮಲ ರಿಷಭ- ಮಾರ್ವಶ್ರೀರಾಗ- ಭೀಮಸೇನ ಜೋಷಿ
2. ಶುದ್ಧ ರಿಷಭ- ದೇಶ್ ರಾಗ- ರಾಮಭಾವು ಬಿಜಾಪುರೆ
3. ಕೋಮಲಗಾಂಧಾರ- ಪೀಲು- ಬಡೇ ಗುಲಾಂ ಅಲಿಖಾನ್
4. ಶುದ್ಧ ಗಾಂಧಾರ- ಕಲಾವತಿ – ರಾಮರಾವ್ ನಾಯಕ್
5. ಪಂಚಮ- ಕೀರವಾಣಿ- ರವಿಶಂಕರ್
6. ಕೋಮಲಧೈವತ- ಮಾಲ್‌ಕೌಂಸ್- ಬಿಸ್ಮಿಲ್ಲಾಖಾನ್
7. ಶುದ್ಧಧೈವತ- ಸೋಹನಿ- ಕುಮಾರಗಂಧರ್ವ
8. ಕೋಮಲ ನಿಷಾದ- ಮಧುಕಂಸ್- ಮಲ್ಲಿಕಾರ್ಜುನ ಮನ್ಸೂರ್
9. ಶುದ್ಧನಿಷಾದ- ಶಂಕರ- ಗಂಗೂಬಾಯಿ ಹಾನಗಲ್
10. ಷಡ್ಜ- ಭೈರವಿ- ಅಬ್ದುಲ್ ಕರೀಂಖಾನ್

ಗಾಯನದಲ್ಲಿ ಪೂರ್ಣಿಮಾಭಟ್ ಕುಲಕರ್ಣಿ, ಸಂಗೀತಾಕಟ್ಟಿ ಕುಲಕರ್ಣಿ, ಕೃಷ್ಣೇಂದ್ರ ವಾಡೇಕರ್, ಹಾರ್ಮೋನಿಯಂನಲ್ಲಿ ರವೀಂದ್ರ ಕಾಟೋಟಿ, ಕೊಳಲು ಪ್ರವೀಣ್ ಗೋಡ್ಖಿಂಡಿ, ಗಿಟಾರ್ ಪ್ರಕಾಶ್ ಸೊಂಟಕ್ಕಿ, ತಬಲಾ ಉದಯರಾಜ್ ಕರ್ಪೂರ್, ಪಕ್ವಾಜ್ ಗುರುಮೂರ್ತಿ ವೈದ್ಯ, ರಿದಂಪ್ಯಾಡ್ ಮಧುಸೂದನ್, ಕೀಬೋರ್ಡ್ ಸಂಗೀತ ಥಾಮಸ್ ಪಾಲುಗೊಂಡಿದ್ದರು. 'ಪಾಲುಗೊಂಡಿದ್ದರು' ಎಂಬುದು ಬರೇ ವಾಕ್ಯಪೂರಣದ ಕ್ರಿಯಾಪದವಲ್ಲ. ಸಂಗೀತದ ಸಕ್ಕರೆಸವಿಗೆ ಹಾಲು(ಪಾಲು) ಮೈಯೊಡ್ಡುವಂತೆ ತೊಡಗಿಸಿಕೊಂಡಿದ್ದರು. ಪ್ರತಿಯೊಂದು ರಾಗದ ಕ್ರಿಯಾಕಲಾಪ ಮುಗಿಯುತ್ತಿದ್ದಂತೆ ಚಿತ್ರಕಲಾವಿದ ಗುರುದಾಸ ಶೆಣೈ ಆಯಾರಾಗದ ಭಾವವರ್ಣವನ್ನು ವರ್ಣಭಾವದಲ್ಲಿ ಭಿತ್ತಿಯಲ್ಲಿ ಮೂಡಿಸುತ್ತಿದ್ದರು.

ಒಂದೇ ಪದಾರ್ಥವನ್ನು ಮಾಡಿ ಇಡೀ ಊಟ ಮುಗಿಸುವ ಕಾಷ್ಠವ್ರತ ಈಗಿನ ದಿನಮಾನಕ್ಕೆ ಒಗ್ಗುವಂತಹದ್ದಲ್ಲ. ಐಟಮ್ಮು- ವೆರೈಟಿ ಎಂದು ತಿನಿಸಿನಿಂದ ಮುನಿಸಿನವರೆಗೂ ಆಕ್ರಮಿಸಿರುವ ಕಾಲ ಇದು. ಹೋಟೆಲಿಗೆ ಹೋದ ತಕ್ಷಣವೇ ನಿರೀಕ್ಷಿಸುವುದೇ ಮೆನುಕಾರ್ಡನ್ನು. ಅದರಲ್ಲಿ ವೈವಿಧ್ಯ ಇರಬೇಕು; ಅದನ್ನು ಆಸ್ವಾದಿಸಲೂಬೇಕು. ಆಗ ಪರಿಮಾಣದ ಜೊತೆಗೆ ಗುಣವೂ, ಗಮನಾರ್ಹವೂ, ಗ್ರಾಹ್ಯವೂ ಇರಬೇಕಾಗುವುದು ಅನಿವಾರ್ಯ. ಇದೇ ನ್ಯಾಯ ದ್ವಾದಶಕ್ಕೂ ಅನ್ವೇಯ. ಇರುವ ಮೂರು ತಾಸು ಅವಧಿಯಲ್ಲಿ ಹನ್ನೆರಡು ರಾಗದ ಜಾತಕಫಲಭಾಗವನ್ನು ಪ್ರೇಕ್ಷಕರಿಗೆ ಹಿತವಾಗುವಂತೆ ಒಪ್ಪಿಸಬೇಕೆಂದರೆ ಅದು ಸುಲಭಸಾಧ್ಯವಾದ ಸಾಹಸವಲ್ಲ. ಕನ್ನಡಿಯಲ್ಲಿ ಪಟ್ಟದಾನೆ ತೋರಿಸುವ ಜಾಣು ಇದು. ಆಚಾರವೂ ಕೆಡಬಾರದು; ಆಕಾರವೂ ಕೆಡಬಾರದು,

ಶಾಸ್ತ್ರವೂ ಉಳಿಯಬೇಕು, ಪ್ರಯೋಗವೂ ಬೆಳೆಯಬೇಕು; ಈ ರೀತಿಯ ವಿನಯವಂತ ಆಶಯದಿಂದ 'ದ್ವಾದಶ' ರೂಪುಗೊಂಡದ್ದರಿಂದ ಸರಿಸುಮಾರು ಹದಿನೈದು ನಿಮಿಷಗಳ ಜೀವಿಕೆ ಒಂದೊಂದು ರಾಗಕ್ಕೂ ಸಂದಿದೆ. ಆ ಕಾಲಮಿತಿಯೊಳಗೆ ಬೆಡಗು ಬಿನ್ನಾಣ ಬಿಬ್ಬೋಕ ಬೆರಗು ಎಲ್ಲವನ್ನೂ ಬಂದೀಶ್‌ಗಳೊಂದಿಗೆ ವಾರೆವ್ಹಾ ಎನ್ನುವಂತೆ ಅಷ್ಟೂ ರಾಗಗಳನ್ನು ಕಾಣಿಸಿದ್ದು, ಉತ್ತರಾದಿಪದ್ಧತಿಯ ವಿಲಂಬಮಾನಕ್ಕೆ ಹೋಲಿಸಿದರೆ ಸರ್ವಥಾ ಪ್ರಶಂಸಾರ್ಹ.

ದ್ರುತಗತಿಯ ರಾಗಗಳ ಓಟ ಪ್ರೇಕ್ಷಕರಿಗೂ ಪ್ರಿಯವಾಗುತ್ತಿತ್ತು. ಅದರಲ್ಲೂ ಗಾಯನ ಹಾಗು ವಾದನಗಳ ಚಾಣಾಕ್ಷ ಅನುಕ್ರಮಣಿಕೆ ಸಭಾಸದಸರಿಗೆ ಏಕತಾನತೆಯನ್ನು ಹೋಗಲಾಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿತ್ತು. ಎಲ್ಲ ಕಲಾವಿದರ ರಾಗ-ಕೃತಿಯ ಪ್ರಸ್ತುತಿ ಒಬ್ಬರಿಗಿಂತ ಒಬ್ಬರದು ಒಂದು ಕೈಮೇಲೆಂದು ಅನಸುವಂತೆ ಒಟ್ಟು ಕಚೇರಿ ಕಲಾಕೋಶವೇ ಆಗಿತ್ತು. ಪರಸ್ಪರ ತುಲನೆಗೆ ಅವಕಾಶ ಕೊಡದಷ್ಟೂ ಬಿಗಿಯಾಗಿ ರಾಗಯಾನ ಸಾಗಿತ್ತು. ಗಮನೀಯ ಅಂಶವೆಂದರೆ ಆಯಾ ವಾದನದ ಜಾಯಮಾನಕ್ಕೆ ಅನುಗುಣವಾಗಿ ಇರುವ ಕ್ಷಿಪ್ರ ಅವಧಿಯಲ್ಲಿ ರಾಗಗಳನ್ನು ತಾನಾದಿ ಕಲಾಕ್ರಿಯೆಗಳ ಮೂಲಕ ಕಲಾವಿದರು ರೂಪಿಸುತ್ತಿದ್ದರು. ಹಾಗಾಗಿ ಸಂಗೀತದ ಹೃದಯವೆನಿಸುವ ಮಾಧುರ್ಯಕ್ಕೆ ಎಲ್ಲೂ ಮುಕ್ಕು ಮುರುಕಲೇ ಇಲ್ಲ. ಅದು ವಿಲಂಬದಲ್ಲಿರಲಿ, ಮಧ್ಯಮದ್ರುತದಲ್ಲಿರಲಿ, ಅತಿದ್ರುತದಲ್ಲಿರಲಿ ಶ್ರಾವಣಮಧುರತೆ ನಿರಂತರವಾಹಿನಿಯಾಗಿದ್ದುದು ಆಯೋಜನಕುಶಲತೆ ಸದ್ಯಃಸಾಕ್ಷಿಯಾಗಿತ್ತು. ಗಾಯನ-ವಾದನದ ಸಮಾಕಲನದಲ್ಲೂ ಈ ಸಮರಸತೆಯ ರುಚಿಗೆಡಲಿಲ್ಲ. 'ಓ ಇದೊಂದು ಇರೋದು ಬೇಡಿತ್ತು' ಅನ್ನುವ ಯಾವ ಕ್ಷಣವೂ ಮೂರೂ ಗಂಟೆಯಲ್ಲಿ ಇಣುಕಲಿಲ್ಲ.

ಇಡೀ ದ್ವಾದಶಸ್ವರಸಂಭ್ರಮದ ಕಲಾಭಿತ್ತಿಗೆ ಅನಿರೀಕ್ಷಿತ ಎಂಬಂತೆ ಸಾಹಿತ್ಯಗಾಂಭೀರ್ಯದ ವಾಚಿಕ ನಿರೂಪಣೆಯ ಚೌಕಟ್ಟು ಸೇರಿ ಒಟ್ಟು ರಂಗದ ರಂಗೇ ಉಜ್ವಲವಾಗಿ ಕಂಗೊಳಿಸಲಿಕ್ಕೆ ಕಾರಣರಾದವರು ಶತಾವಧಾನಿ ಡಾ. ಆರ್. ಗಣೇಶ್. ಸಾಹಿತ್ಯಭಾಗವನ್ನು ಹೆಚ್ಚು ತಾಳಿಕೊಳ್ಳದ ಗುಣದ ಸಂಗೀತಕ್ಕೆ ಇಷ್ಟಾದರೂ ಮಾತಿನ ಮಾಲೆ ಇದ್ದರೆ ಚೆನ್ನಕ್ಕೂ ಚೆನ್ನ ಎನ್ನುವಂತೆ ಗಣೇಶರು ಆದ್ಯಂತ ಮಾತಿನ ಸೋನೆಮಳೆ ಹನಿಸಿ ಸಹೃದಯಹೃದಯಾಹ್ಲಾದನಕ್ಕೆ ಇಂಬುಗೊಟ್ಟರು. ಒಂದು ನಿಮೇಷಕಾಲವನ್ನೂ ವ್ಯರ್ಥ ಮಾಡದೇ- ಶ್ರೂಯತೇ ಇತಿಶ್ರುತಿಃಸ್ವತೋ ರಾಜಂತೇ ಇತಿ ಸ್ವರಾಃ -ರಂಜನಾತ್ ರಾಗಃ- ಷಟ್ ಜಾಯಂತೇ ಇತಿ ಷಡ್ಜಃ -ಹೀಗೆ ಶಾಸ್ತ್ರೀಯವಾಗಿ ಶಬ್ದನಿರ್ವಚನದೊಂದಿಗೆ ಸಂಗೀತಶಾಸ್ತ್ರವನ್ನು ಪರಿಚಯಿಸುತ್ತ, ಭಾರತೀಯ ಸೃಷ್ಟಿ-ದೃಷ್ಟಿಯನ್ನು ಪುಷ್ಟೀಕರಿಸುತ್ತ ನಮ್ಮ ಪರಂಪರೆಯ ಬಗ್ಗೆ ಅಲ್ಲಲ್ಲೇ ಹೆಮ್ಮೆಪಡುವಂತೆ ಸೋದಾಹರಣವಾಗಿ ವಿವರಿಸುತ್ತ, ಭಾರತೀಯ ಸಂಗೀತದ ಮೂಲಕ ಅರಳಿದ ಸಂಸ್ಕೃತಿಯ ಹೆಜ್ಜೆಗುರುತನ್ನು ತೋರಿಸುತ್ತ, ಸಂಗೀತಶಾಸ್ತ್ರಗ್ರಂಥಗಳ ಉಲ್ಲೇಖಗಳ ಮೂಲಕ ಭಾರತದಲ್ಲಿ ನಡೆದ ಸಂಗೀತವಿಷಯಕವಾದ ಗಂಭೀರಶೋಧ ಚರ್ಚೆಗಳನ್ನು ಮಂಡಿಸುತ್ತ ಇಷ್ಟಕ್ಕೂ ರಾಗಾಸ್ವಾದಕ್ಕೆ ಕಿಂಚಿತ್ತೂ ಧಕ್ಕೆಯಾಗದಂತೆ ಅರಿವನ್ನು ಹರಹುತ್ತ, ಸಂಗೀತಶ್ರವಣದಷ್ಟೇ ಕುತೂಹಲವನ್ನು ತಮ್ಮ ನಿರೂಪಣದಲ್ಲಿ ಪ್ರೇಕ್ಷಕರು ನಿರೀಕ್ಷಿಸುವಂತೆ ಉದ್ಬೋಧಕವಾಗಿ ವಾಣೀವಿಭವವನ್ನು ಗಣೇಶರು ತೆರೆದಿಟ್ಟದ್ದು ಕಾರ್ಯಕ್ರಮಕ್ಕೊಂದು ಹೊನ್ನಗರಿ.

12-12-12ರ ನೆವದಲ್ಲಿ ದ್ವಾದಶ ಪರಿಕಲ್ಪನೆಯಲ್ಲಿ ನಾದಗಂಗಾನಿರ್ಝರಣಿಯನ್ನು ಸಾಕ್ಷಾತ್ಕರಿಸಿದ ರವೀಂದ್ರಕಾಟೋಟಿಯ ಭಾಗೀರಥಪ್ರಯತ್ನ ಇತ್ಯೋಪತಿಶಯವಾಗಿ ಸಂಗೀತರಸಪಾನವನ್ನು ಸಹೃದಯ ಲೋಕಕ್ಕೆ ಮಾಡಿಸುತ್ತಲೇ ಇರಲಿ ಎಂಬುದು ರಸಿಕಜಗತ್ತಿನ ನಿರೀಕ್ಷೆ ಹಾರೈಕೆ.

(ಲೇಖಕರು ಅವಧಾನ ಪೃಚ್ಛಕರು, ವಿದ್ವಾಂಸರು, ಸಹೃದಯ ಕವಿ, ವಿಮರ್ಶಕರು) ■

# ಹಸ್ತ ಮಯೂರಿ




(ಸಂಪಾದಕಿ ಮನೋರಮಾ ಬಿ.ಎನ್ ರಚಿತ
'ಮುದ್ರಾರ್ಣವ' ಗ್ರಂಥದಿಂದಾಯ್ದ ಅಂಕಣ ಸರಣಿ)

**ಲಕ್ಷಣ: ಅರ್ಧ ಚಂದ್ರ ಹಸ್ತದ ಎಡಗೈ ಮಧ್ಯದಲ್ಲಿ ಶಿಖರಹಸ್ತದ ಬಲಗೈಯನ್ನು ಇರಿಸುವುದು. ಅಭಿನಯ ದರ್ಪಣವನ್ನು ಹೊರತುಪಡಿಸಿದರೆ ನಾಟ್ಯಶಾಸ್ತ್ರ, ಸಾರಸಂಗ್ರಹ, ಲಾಸ್ಯರಂಜನ, ಹಸ್ತ ಮುಕ್ತಾವಳಿಗಳಲ್ಲಿ ಈ ಹಸ್ತದ ಪ್ರಸ್ತಾಪವಿಲ್ಲ. ಇದನ್ನು ಹಿಂದೂ ಧಾರ್ಮಿಕವಿಧಿಗಳಲ್ಲಿ ಮೇರುಮುದ್ರಾ ಎಂಬುದಾಗಿಯೂ ಹೆಸರಿಸಲಾಗಿದ್ದು; ಆರೋಗ್ಯಕ್ಕಾಗಿ ಬಳಸುವ ಮುದ್ರೆಗಳಲ್ಲಿಯೂ ಶಿವಲಿಂಗ ಮುದ್ರೆಯು ಪ್ರಚಲಿತ. ಇದು ಆಯಾಸ ಪರಿಹಾರಕ್ಕೆ, ಅತೃಪ್ತಿ–ತಳಮಳ–ನಿರುತ್ಸಾಹ ನಿವಾರಣೆಗಾಗಿ ಅನುಕೂಲಕರ.**

**ವಿನಿಯೋಗ :** ಶಿವಲಿಂಗ, ಶಿವನ ಭಾವನಾರೂಪದ ಸಂಕೇತ.

ನಿತ್ಯಜೀವನದಲ್ಲಿ ದೃಢಭಾವನೆ, ಯಾಕೆ ಎಂದು ಕೇಳುವುದಕ್ಕೂ ಈ ಮುದ್ರೆ ಬಳಕೆಯಾಗುತ್ತದೆ.

---



## ನಿಮ್ಮ ಬರಹ ನಮ್ಮ ಓದು...

**ಉಡುಪಿಯ ಚಿಂತಕರಾದ ಎನ್.ಟಿ.ಭಟ್, ವಿದುಷಿ ರಶ್ಮಿ ಕಲ್ಕೂರ, ವಿದ್ವಾನ್ ಭವಾನಿಶಂಕರ್, ಗೋವಿಂದ ಪೈ ಸ್ಮಾರಕ ಸಂಶೋಧನಾ ಕೇಂದ್ರ ಪೂರ್ಣಪ್ರಜ್ಞ ಕಾಲೇಜು, ಟಿಎಂಎ ಪೈ ಕಾಲೇಜು ಮತ್ತು ಎಂಜಿಎಂ ಕಾಲೇಜು, ವೈಕುಂಠ ಬಾಳಿಗ ಕಾನೂನು ಕಾಲೇಜು, ಉಪೇಂದ್ರ ಪೈ ಕಾಲೇಜಿನ ಪ್ರಾಚಾರ್ಯರುಈ ಸಾಲಿನ ವರ್ಷದ ಸದಸ್ಯರಾಗಿದ್ದಾರೆ.**

'ಬಲೆ ಬೀಸುವ ಕಲೆಯ ನೆಲೆ ಬೆಲೆ'ಯೆಂಬ ನಿವೇದಿತಾ ಶ್ರೀನಿವಾಸ್ ಅವರು ನೀಡಿದ ನರ್ತನ ಸುರಭಿಯ ಬರಹ ಗಮನ ಸೆಳೆಯುವಿಕೆಯಲ್ಲಿ ಹಿಂದುಳಿಯಲಿಲ್ಲ. ಚೆಂದದ ಗಂಧದ ಗೊಂಬೆಯ ರೀತಿಯಲ್ಲಿ ಆವಿಷ್ಕಾರ ಹೊಂದಿದ ಈ ಚಿಂತನಾರ್ಹವಾದ ಲೇಖನ ಬೆಲೆ ಕಟ್ಟಲನರ್ಹವಾದ ಸ್ವಾನುಭವದ ವಿಚಾರವೆಂದು ತಳ್ಳಿಬಿಡುವಂತಹ ಸಣ್ಣತನದ್ದೂ ಅಲ್ಲ. ಯಾವುದೇ ಕಲೆಯಾದರೂ ಪರಿಣತಿ,ಪರಿಪೂರ್ಣತಾವಾದ ಮೂಡಬೇಕಾದರೆ ಆತನ ಕಲಿಕೆಗಿಂತಲೂ ಆಸಕ್ತಿ, ಮನೆತನದ ಪೂರ್ವ ಹಿಡಿತ ಒಳಗೊಂಡಿರಬೇಕು ಎನ್ನುವುದೇ ಮುಖ್ಯ. ಇಷ್ಟಕ್ಕೂ ಲೇಖಕಿ ವ್ಯಾಖ್ಯಾನಪಡಿಸಿದ ವಿಚಾರದತ್ತ ಹೊರಳಿದರೆ ಮಂತ್ರವೊಂದನ್ನು ಉದಾತ್ತೀಕರಿಸಿದ ಅಭಾಸಕರ ನಿಯಮಾವಳಿಗಳು ಯಕ್ಷಿಣಿ ವಿದ್ಯೆ, ಇಂದ್ರಜಾಲಗಳಲ್ಲಿವೆ. ಅಂತಹವು ಕಲೆಯೆಂದು ಪರಿಗಣಿಸಲು ಸಾಧ್ಯವೆಂಬ ಅಬ್ಬರದ ಹೂಂಕಾರ ಗಳೇನಿದ್ದರೂ 'ಲೋಕೋಭಿನ್ನರುಚಿಃ' ಎಂಬ ಆರ್ಯೋಕ್ತಿಯಂತೆ ಮೇಲಿನ ರಂಗಭೂಮಿ ತಜ್ಞರಿಗೆ ಸರಿಯೆಂದು ಕಂಡಿರಬಹುದು. ಆದರೆ ನಿರಂತರ ತಪೋಭಾವನೆಯಿಂದ ಕಲಿತು ಕೈವಶಪಡಿಸಿಕೊಂಡ ಕಲಾಚಟುವಟಿಕೆಗಳೆಲ್ಲವೂ ಶಾಶ್ವತವಾಗಿ ಕಲೆಯೆಂದೇ ಎಣಿಸಲ್ಪಡುತ್ತವೆಯಲ್ಲದೆ; ಇಂದ್ರಜಾಲ ವಿದ್ಯೆ ಕಲೆಯಲ್ಲವೆಂಬುದೇ ಎಂದೇ ನನ್ನೊಡಲ ಅನಿಸಿಕೆ. ಒಂದರ್ಥದಲ್ಲಿ ಕಲಾರಂಗಗಳೆಲ್ಲವೂ ಭಾರತೀಯ ಪುರಾತನ ಕಲೆಗಳತ್ತ ಕಣ್ಣೋಡಿಸಿ ಮೆಲ್ಲನೆ ಮೇಲೆದ್ದು ಗಮನಹರಿಸಿ ಮನ ಕೊಡಲಾರಂಭಿಸುತ್ತಿರುವ ಈ ಪರ್ವಕಾಲದಲ್ಲಿ ಭಿನ್ನತೆಯ ಮನೋಭಾವ ಬಿಟ್ಟುಕೊಟ್ಟು, ಕಲೆಗಳೆಲ್ಲವನ್ನೂ ಪ್ರೋತ್ಸಾಹಿಸುವ ವಾತಾವರಣಕ್ಕೊಂದು ನಿವೇದಿತಾರವರ ಬರೆಹ ನಾಂದಿಯೆನಿಸಲ್ಪಡಲಿ ಎಂಬ ಹಾರೈಕೆಯೊಂದಿಗೆ ಶುಭಕಾಮನೆಗಳು.

**– ಕೀರಿಕ್ಕಾಡು ವನಮಾಲ ಕೇಶವ ಭಟ್ಟ, ಕಾಸರಗೋಡು.**

# ದರ್ಪಣ ನೃತ್ಯ ರಂಗದ ರಾಣಿ : ರುಕ್ಮಿಣಿ...

(ಹೆಜ್ಜೆ : 17)

– 'ಮನೂ' ಬನ

**ಕಳೆದ ಸಂಚಿಕೆಯಲ್ಲಿ...**



**(ಸರ್ಕಸ್‌ಗಳಲ್ಲಿ ಪ್ರಾಣಿಗಳನ್ನು ಮನರಂಜನೆಯ ಉದ್ದೇಶದಿಂದ ಬಳಸುವುದರ ಬಗ್ಗೆ ರುಕ್ಮಿಣಿಗೆ ವಿರೋಧವಿತ್ತು. ಜೊತೆಗೆ ಧರ್ಮದ ಹೆಸರಿನಲ್ಲಿ ಪ್ರಾಣಿಬಲಿಯ ಕುರಿತೂ ಅವರು ಕಿಡಿಕಿಡಿಯಾಗಿದ್ದರು. 'ಸಸ್ಯಾಹಾರವು ವ್ಯಕ್ತಿ ಧಾರ್ಮಿಕವಾಗಿ, ಆರೋಗ್ಯವಾಗಿ, ಆರ್ಥಿಕವಾಗಿರಲು ಸಹಕಾರಿಯಾಗಿದೆ. ದೇಹವು ಸಸ್ಯಾಹಾರಕ್ಕಷ್ಟೇ ಸೂಕ್ತ. ಪ್ರಾಣಿಗಳ ದೇಹವನ್ನು ತಿನ್ನುವುದರಿಂದ ದೇಹವು ಸ್ಮಶಾನವಾಗುತ್ತದೆ' ಎನ್ನುವವರು ರುಕ್ಮಿಣೀ. 'ಜೀವಂತವಾಗಿದ್ದಾಗಲೇ ಪ್ರಾಣಿಗಳನ್ನು ನಾನಾ ಬಗೆಯಾಗಿ ವಿಧವಿಧವಾಗಿ ಕತ್ತರಿಸಿ ಹಿಂಸೆ ಮಾಡುವುದು ಸಂಪೂರ್ಣವಾಗಿ ನಿಷೇಧಿಸಬೇಕು. ನಾಗರೀಕತೆಯ ಬೆಳವಣಿಗೆಯ ಪರೀಕ್ಷೆ ಎಂದರೆ ಭಾವನೆಗಳ ಬೆಳವಣಿಗೆ ಮತ್ತು ಪ್ರೇಮಮಯೀ ನಡವಳಿಕೆ' ಎಂದಿದ್ದರು. ಫೆಬ್ರವರಿ 2, 1986ರಂದು ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕದಲ್ಲಿ ತಮ್ಮ ಕೊನೆಯ ಕ್ಷಣಗಳನ್ನು ಎಣಿಸುತ್ತಿದ್ದಾಗಲೂ ಲಯನ್ಸ್ ಆಯೋಜಿಸಿದ್ದ ಅಂತಾರಾಷ್ಟ್ರಿಯ ಪ್ರಾಣಿದಯಾ ವಿಚಾರಸಂಕಿರಣದ ಸಂಬಂಧ ಲಯನ್ಸ್ ಜಿಲ್ಲಾ ನಿರ್ದೇಶಕರಿಗೆ ಬರೆಯಬೇಕಿದ್ದ ಪತ್ರದ ಬಗ್ಗೆ ಆಗಾಗ್ಗೆ ಕಾಳಜಿಯಿಂದ ವಿಚಾರಿಸುತ್ತಿದ್ದರಂತೆ; ಜೊತೆಗೆ ತಾವೂ ಸಮ್ಮೇಳನದಲ್ಲಿ ಪಾಲ್ಗೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರು. ಅಂತವರನ್ನು ಒಮ್ಮೆ ರಾಷ್ಟ್ರಪತಿ ಹುದ್ದೆ ಹುಡುಕಿ ಬಂದಿತ್ತು!!!)**

**ಸಾ**ಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡು ದೇಶದ ಸಾಂಸ್ಕೃತಿಕ ರಾಯಭಾರಿಯಾದ ನಂತರ ತಾವು ನೃತ್ಯ ಕಾರ್ಯಕ್ರಮ ಮಾಡುವುದನ್ನು ನಿಲ್ಲಿಸಿದ್ದರು ರುಕ್ಮಿಣೀ. 1977ರಲ್ಲಿ ರಾಷ್ಟ್ರಪತಿ ಸ್ಥಾನಕ್ಕೆ ಅಭ್ಯರ್ಥಿಯಾಗಲು ಮೊರಾರ್ಜಿ ದೇಸಾಯಿ ಅವರಿಂದ ರುಕ್ಮಿಣಿಗೆ ಆಹ್ವಾನ ಬಂದಿತ್ತು. ಆದರೆ ಮೊರಾರ್ಜಿ ಎಷ್ಟೇ ಒತ್ತಾಯ ಹೇರಿ ಬೆಂಬಲಿಸಿದರೂ 'ನನಗೆ ಅದು ಪೂರ್ಣತ್ವವನ್ನು ಕೊಡಲಾರದು, ನನ್ನ ಕ್ಷೇತ್ರವಲ್ಲ, ತನ್ನ ಜೀವನ ಕಲೆಗೆ' ಎಂಬುದನ್ನೇ ದೃಢವಾಗಿ ಹೇಳಿ ರುಕ್ಮಿಣೀ ಆ ಆಹ್ವಾನವನ್ನು ನಯವಾಗಿಯೇ ನಿರಾಕರಿಸಿದರು! ರಾಷ್ಟ್ರಪತಿ ಹುದ್ದೆಗೆ ಕೊಡುವ ಗಮನದಿಂದಾಗಿ ನೃತ್ಯಾದಿ ಕಲೆಗಳಿಗೆ ಕೊಡುವ ಗಮನ ವಿಕೇಂದ್ರೀಕರಿಸುತ್ತದೆ. ಅಂತಹ ಸ್ಥಾನಗಳೇನಿದ್ದರೂ ಉನ್ನತವಾದ ಆದರ್ಶ ಗಳನ್ನಿಟ್ಟುಕೊಂಡ ವ್ಯಕ್ತಿಗೆ ಅರ್ಹವೆಂದು ಅವರ ಆಶಯ! ಇಂತಹ ಧೀಮಂತ ಪ್ರತಿಜ್ಞೆಯನ್ನು ಇಂದಿನ ಕಾಲದಲ್ಲಿ ನಿರೀಕ್ಷಿಸಲೂ ಅಸಾಧ್ಯವೇನೋ! ಬಹುಷಃ ಒಪ್ಪಿದ್ದರೆ ಅಂದೇ ನಮ್ಮ ದೇಶ ಓರ್ವ ಸಮರ್ಥ ಪ್ರಥಮ ಮಹಿಳಾ ರಾಷ್ಟ್ರಪತಿಯನ್ನು ಕಾಣುತ್ತಿತ್ತು!



ಇಂತಹ ಮಹಾನ್ ವ್ಯಕ್ತಿಗೆ ಸಲ್ಲಬೇಕಾದ ಎಲ್ಲಾ ಪ್ರಶಸ್ತಿ ಪುರಸ್ಕಾರ ಸನ್ಮಾನಗಳು ಯಥೋಚಿತವಾಗಿ ಸಂದಿವೆ. ಅವುಗಳ ಪೈಕಿ 1956ರಲ್ಲಿ ಪದ್ಮಭೂಷಣ, 1957ರಲ್ಲಿ ನಾಟಕ ಅಕಾಡೆಮಿ ಪುರಸ್ಕಾರ, 1972ರಲ್ಲಿ ವಿಶ್ವಭಾರತಿ ವಿಶ್ವವಿದ್ಯಾನಿಲಯದಿಂದ ದೇಶಿಕೋತ್ತಮ, 1967ರಲ್ಲಿ ಸಂಗೀತ ನಾಟಕ ಅಕಾಡೆಮಿ ಫೆಲೋಷಿಪ್, 1968ರಲ್ಲಿ ಆನಿಮಲ್ ವೆಲ್ಫೇರ್ ಬೋರ್ಡ್ ಆಫ್ ಇಂಡಿಯಾ ಮತ್ತು ಪ್ರಾಣಿ ಹಿಂಸೆ ತಡೆ ಕಾಯ್ದೆಯ ಪ್ರಧಾನ ರೂವಾರಿಯಾಗಿ ಕಾರ್ಯ ನಿರ್ವಹಿಸಿದ್ದಕ್ಕೆ 1958ರಲ್ಲಿ ಕ್ವೀನ್ ವಿಕ್ಟೋರಿಯಾ ಬೆಳ್ಳಿ ಪದಕ ಮತ್ತು ಪ್ರಾಣಿ ಮಿತ್ರ ಪ್ರಶಸ್ತಿ,; 1960ರಲ್ಲಿ ಹೇಗ್‌ನ ಕೌನ್ಸಿಲ್ ಆಫ್ ದ ವರ್ಲ್ಡ್



ಫೆಡರೇಶನ್ ಫಾರ್ ದ ಪ್ರೊಟೆಕ್ಷನ್ ಆಫ್ ಎನಿಮಲ್ಸ್‌ನಿಂದ ರೋಲ್ ಆಫ್ ಹಾನರ್, ವೇನ್ ಸ್ಟೇಟ್ ವಿಶ್ವವಿದ್ಯಾನಿಲಯದ ಮಾನವಿಕ ವಿಭಾಗದಿಂದ ಗೌರವ ಡಾಕ್ಟರೇಟ್, ಕೌಂಟಿ ಮತ್ತು ಸಿಟಿ ಆಫ್ ಲಾಸ್ ಏಂಜೆಲ್ಸ್‌ನಿಂದ 1960ರಲ್ಲಿ ಸ್ಕ್ರಾಲ್ಸ್ ಆಫ್ ಹಾನರ್, 1984 ರಲ್ಲಿ ಕಾಳಿದಾಸ ಸಮ್ಮಾನ್, ಯುಎಸ್‌ಎಯ ವಾನ್ ಸ್ಟೇಟ್ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪ್ರಮುಖವಾದವು. ಥಿಯೋಸೋಫಿಕಲ್ ಸೊಸೈಟಿಯಲ್ಲಿ ಅಧ್ಯಕ್ಷಸ್ಥಾನ ಮತ್ತು ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗೂ ರಾಷ್ಟ್ರೀಯ ಕಮಿಟಿಗಳ ಅಧ್ಯಕ್ಷೆಯಾಗಿ ಕಾರ್ಯದೊಂದಿಗೆ ಇನ್ನೂ ಅವರ ಯೌವನದ ಕಾಲದ ಪ್ರಶಸ್ತಿ ಪುರಸ್ಕಾರ, ಬಿರುದುಗಳ ಪಟ್ಟಿ ಹೇಳುತ್ತಾ ಹೋದರೆ ಸಾಕಷ್ಟಿದೆ ! 'ದೇವಿ' ಎಂದು ಅನ್ನಿ ಬೆಸೆಂಟ್ ನಾಮಧೇಯವನ್ನಿತ್ತಿದ್ದು ಅಂತಹ ಪ್ರಪ್ರಥಮಗಳಲ್ಲಿ ಒಂದು.

ಅವರದ್ದು ಸೃಷ್ಟಿಶೀಲ ಮನಸ್ಸಿದ್ದ ನೈಜ ಭಾರತೀಯ ಬಹುಮುಖೀ ವ್ಯಕ್ತಿತ್ವ. ವಿವಿಧ ಕಾರಣಗಳಿಗಾಗಿ ಜಾಗತಿಕವಾಗಿ ದುಡಿದವರು. ಕಲೆ ಅಳಿಯುವಂತಹ ಸಂಸ್ಕೃತಿಯಲ್ಲ ; ಆದರೆ ಅದರ ಬೆಳವಣಿಗೆ ಚಲನಶೀಲ ಎಂಬುದು ರುಕ್ಮಿಣೀ ನಂಬಿಕೆ. ಒಮ್ಮೊಮ್ಮೆ ಅವರು ಒಂದೊಂದು ವಿಷಯದ ಪ್ರತಿನಿಧಿಯಂತೆ ತೋರಿದರೂ ; ಒಟ್ಟಾರೆಯಾಗಿ ಅವರ ಸಮಗ್ರ ಜೀವನವೇ ನೃತ್ಯಕ್ಕೆ ಒತ್ತಾಸೆಯಾಗಿ ಬದುಕಿದ್ದು ಎಂಬುದು ಸುಸ್ಪಷ್ಟ. ಪ್ರಾಣಿ ಕ್ಷೇಮಾಭ್ಯುದಯ, ಕಲಾ ಶಿಕ್ಷಣದ ನೇತಾರರಾಗಿ, ಥಿಯೋಸೋಫಿಸ್ಟ್ ಆಗಿ, ಹಲವು ಸಂಸ್ಥೆಗಳ ಜನನಿಯಾಗಿ, ಸಾಂಸ್ಕೃತಿಕ ರಾಯಭಾರಿಯಾಗಿ, ಭಾರತದ ರಾಜ್ಯಸಭಾ ಸದಸ್ಯೆಯಾಗಿ..ಹೀಗೆ ಹತ್ತು ಹಲವಾರು. 'ಶಿಕ್ಷಣದಿಂದ ವ್ಯಕ್ತಿಯ ಉದ್ಧಾರವಾಗುವುದಷ್ಟೇ ಅಲ್ಲ ; ಮಾನವ ಜನಾಂಗದ ಉದ್ಧಾರವಾಗಬೇಕು. ವಿದ್ವತ್ಪೂರ್ಣ ಸಾಧೆಗಳಿಂದ ವಿಷಯದ ಮೇಲಿನ ಹಿಡಿತದಿಂದ ಬೌದ್ಧಿಕ ತೃಪ್ತಿ ಸಿಗುತ್ತದೆ ; ಆದರೆ ಆಂತರಂಗಿಕ ತೃಪ್ತಿಯಷ್ಟೇ ನಿಜವಾದ ಸಂತೋಷ ಕೊಡುತ್ತದೆ. ಅದಕ್ಕಾಗಿ ಜೀವನವನ್ನು ಮುಡಿಪಿಡಬೇಕು' ಎಂಬುದು ಅವರ ನಿಲುವು.

ಸಂಪ್ರದಾಯದ ಸ್ಪರ್ಶ, ಸೃಷ್ಟಿಶೀಲ ಮನಸ್ಥಿತಿಯ ಸಾಂಗತ್ಯವನ್ನು ನೃತ್ಯದ ಕ್ಯಾನ್ವಾಸ್‌ನಲ್ಲಿ, ಸಮಕಾಲೀನ ದೃಷ್ಟಿಯಲ್ಲಿ ಸ್ಪಷ್ಟವಾಗಿ ಕಂಡುಕೊಳ್ಳುವ ಕಾರ್ಯ ರುಕ್ಮಿಣಿಯಿಂದಾಗಿತ್ತು. ಆದರೆ ತಮ್ಮ ಕೊನೆಗಾಲದಲ್ಲೂ ರುಕ್ಮಿಣಿ ಸ್ಮರಣೆ ಮಾಡಿಕೊಳ್ಳುತ್ತಿದ್ದದು ಪುರಾತನ, ಸಾಂಪ್ರದಾಯಿಕ ಪದ್ಧತಿಗಳನ್ನು. 'ಅದರಿಂದಾಗಿಯೇ ತನಗೆ ಸಮಕಾಲೀನವಾಗಿ ಇಂದಿನ ಅಗತ್ಯಗಳನ್ನು ಪೂರೈಸಲು ಅನುಕೂಲವಾಯಿತು. ಏಕವ್ಯಕ್ತಿಯಾಗಿ ಪ್ರದರ್ಶಿತವಾಗುತ್ತಿದ್ದ ಭರತನಾಟ್ಯವನ್ನು ರೂಪಕಗಳನ್ನಾಗಿ ರೂಪಿಸುವಲ್ಲಿ ಅನುವು ನೀಡಿ ಕಲಾದೃಷ್ಟಿಗೆ ಹೊಸಪ್ರಭೆ ಮತ್ತು ಪದವೂರಲು ಕಾರಣವಾಯಿತು' ಎಂದು ನೆನಪಿಸಿಕೊಳ್ಳುತ್ತಿದ್ದರು.

ಅವರ ಕೊನೆಯ ದಿನಗಳಲ್ಲಿಯೂ ಕ್ರಿಯಾಶಕ್ತಿ, ಸೃಷ್ಟಿಶೀಲತೆ ಬತ್ತಿರಲಿಲ್ಲ. ತಮ್ಮ ಶಿಷ್ಯರನ್ನು ಗುರುಗಳನ್ನಾಗಿಸುವಲ್ಲಿ ನಿರಂತರ ಯತ್ನ ಮುಂದುವರಿದಿತ್ತು. ಜೊತೆಗೆ ಇನ್ನೂ ಹೆಚ್ಚಿನ ಶ್ರಮವಹಿಸಿ ದೇವಸ್ಥಾನದ ವಾತಾವರಣ, ವೈಶಿಷ್ಟ್ಯತೆ, ಶಿಲ್ಪ ಮತ್ತು ನಾಟ್ಯದ ಮಾದರಿಯಲ್ಲಿ ಕೇರಳ ಕೂತಾಂಬಲಂ ಮಾದರಿಯ ಭವ್ಯ ಪ್ರದರ್ಶನ ಸೌಧ ಕಟ್ಟುವ ಆಸೆ ಅವರಿಗಿತ್ತು. ಅಪ್ಪುಕುಟ್ಟನ್ ನಾಯರ್ ಈ ಸೌಧವನ್ನು ವಿನ್ಯಾಸ ಮಾಡಿದ್ದರು. ಇಂದು ಕಲಾಕ್ಷೇತ್ರದ 100 ಎಕರೆ ವಿಸ್ತೀರ್ಣದೊಳಗೆ ಈ ಸೌಧ ಭವ್ಯವಾಗಿ ಎದ್ದು ನಿಂತಿದೆಯೆಂದರೆ ಅದರ ಹಿಂದಿರುವುದು ರುಕ್ಮಿಣಿ ಕನಸು. ಪ್ರೇಕ್ಷಕನಿಗೆ ಏಕಾಂಗಿತನವೋ ಅಥವ ಹೊರ ನೈಸರ್ಗಿಕ ಜಗತ್ತಿನಿಂದ ಪ್ರತ್ಯೇಕಗೊಂಡ ಉದಾಸೀನದ ವಾತಾವರಣವೋ ಕಾಣಸಿಗದಷ್ಟರ ಮಟ್ಟಿಗಿನ ಭವ್ಯತೆಯಿದೆ. ಅದರ ಮೆಟ್ಟಿಲುಗಳೂ ಆಕರ್ಷಕವಾಗಿ ಕೋಲಂ



ವಿನ್ಯಾಸದಲ್ಲಿವೆ. ನಾಟ್ಯಶಾಸ್ತ್ರ ಹೇಳುವ ಶಿಲ್ಪಗಳನ್ನು ಅಳವಡಿಸಲಾಗಿದೆ. ಕೊನೆಗೂ ಆಡಿಟೋರಿಯಂ 1986ರಲ್ಲಿ ಅಂದರೆ ಅವರ ಕೊನೆಯ ಕ್ಷಣದ ಮುಂಚೆ ಸಿದ್ಧವಾಗಿತ್ತು ಎನ್ನುವುದೇ ಅವರ ಧ್ಯೇಯನಿಷ್ಠೆಗೆ ಸಾಕ್ಷಿ ! ಕೊನೆಗೂ ತಮ್ಮ ಛಲ ಪೂರೈಸಿ ಅವರೇ ಕಟ್ಟಿಸಿದ ಕಲಾಕ್ಷೇತ್ರಕ್ಕೆ 1985ರಲ್ಲಿ ನಡೆದ ವಜ್ರ ಮಹೋತ್ಸವದ ಸಂದರ್ಭ ಕಾಣಿಕೆಯಾಗಿ ನೀಡಿದ ಬಳಿಕವೇ ಅವರು ಇಹಲೋಕ ತ್ಯಜಿಸಿದ್ದು!

ಆದರೆ...,ತಮ್ಮ ಜೀವಿತದ ಕಾಲದಲೇ ಕಲಾಕ್ಷೇತ್ರ ತನ್ನ ಕ್ರಿಯಾಶೀಲತೆಯನ್ನು ಉಳಿಸಿಕೊಳ್ಳುವ ಕುರಿತು ರುಕ್ಮಿಣಿ ಸಂಶಯ ವ್ಯಕ್ತಪಡಿಸಿದ್ದರು. ಕಾರಣ, ಕಲಾಕ್ಷೇತ್ರದಲ್ಲಿ ಕ್ರಮೇಣ ಆಂತರಿಕ ಜಗಳಗಳು ಪ್ರಾರಂಭವಾಗಿದ್ದವು. ಹಕ್ಕುದಾರಿಕೆ ಶುರುವಾಗಿತ್ತು. ಇಂತಹ ರಾಜಕಾರಣ ಇಣುಕಿದ್ದಕ್ಕೆ ರುಕ್ಮಿಣೀ ಬಹು ನೊಂದಿದ್ದರು ಕೂಡಾ ! ಜೊತೆಗೆ ಶ್ವಾಸಕೋಶದ ಕ್ಯಾನ್ಸರ್ ಅವರನ್ನು ತೀವ್ರವಾಗಿ ಬಾಧಿಸಿತ್ತು. ಆದರೂ ತಾವು ಹುಟ್ಟಿಬಂದ ಜವಾಬ್ದಾರಿಯನ್ನು ಯಶಸ್ವಿಯಾಗಿ ಮಾಡಿ ಮುಗಿಸಿದ್ದರು. ಫೆಬ್ರವರಿ 24, 1986 ರಲ್ಲಿ ಚೆನ್ನೈನಲ್ಲಿ ರುಕ್ಮಿಣೀ ಎಂಬ ದಿವ್ಯಜ್ಯೋತಿ ಅಸ್ತಂಗತವಾಯಿತು. ಆಗ ಅವರಿಗೆ 82 ವರ್ಷ ವಯಸ್ಸು.

'ನೃತ್ಯದ ಪಾಲಿಗೆ ಋಷಿ ಸಮಾನರಾದ ರುಕ್ಮಿಣಿ ಅಸ್ತಂಗತರಾದಾಗಲೂ ಅವರಲ್ಲಿ ಜೀವಂತ ಕಳೆಯಿತ್ತು. ಅಂತಹ ಪ್ರಭೆ ಅವರಲಿತ್ತು ! ಅವರು ಪ್ರೀತಿಸಿದ್ದ ಪರಿಸರದಲ್ಲಿ ಆರಾಮವಾಗಿ ಮಲಗಿ ಯೋಗನಿದ್ರೆಯಲ್ಲಿ ಲೀನವಾಗಿದ್ದವರಂತೆ ಕಂಡರು ! ಯಾವುದೇ ಬೆಳಕು, ಫೋಟೋ, ಅರಚಾಟ, ವೀಡಿಯೋ, ಫ್ಲ್ಯಾಶ್‌ಗಳಿಲ್ಲದೆ ಪರಿಸರ ಶಾಂತವಾಗಿತ್ತು. ಶಂಕರ ಮೆನನ್ ವ್ಯಕ್ತಿ ಅಮರವಾಗುವ ಪರಿಕಲ್ಪನೆಯ ಕುರಿತು ಕೆಲವು ನಿಮಿಷ ಮಾತನಾಡಿದರು' ಎಂದು ಅವರ ನಿಧನಾನಂತರದ ಕ್ಷಣಗಳನ್ನು ನೆನಪಿಸಿಕೊಳ್ಳುತ್ತಾರೆ ಕಲಾಕ್ಷೇತ್ರ ಗ್ರಂಥಾಲಯದ ಅಧ್ಯಕ್ಷ ಆರ್. ನಾಗಸ್ವಾಮಿ.

ಕೊನೆಗೂ ಅವರು ಅಂದುಕೊಂಡಂತೆಯೇ ಆಯಿತು...ಅವರ ನಿಧನಕ್ಕೂ ಮುಂಚೆ ಇದ್ದ 2 ಗುಂಪುಗಳ ತಿಕ್ಕಾಟ ಮತ್ತೂ ಬಲವಾದವು. ನಂತರ ಒಂದು ಸಂಧಿಗ್ಧ ಪರಿಸ್ಥಿಯಲ್ಲಿ 1993 ರಲ್ಲಿ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸಿ ತನ್ನ ಅಧೀನಕ್ಕೆ ತೆಗೆದುಕೊಂಡಿತು. ಇಂತಹ ಒಂದು ಕಲಾಕೇಂದ್ರ ಭಾರತಕ್ಕೆ ಬೇಕು ಎಂಬುದನ್ನು ಅರಿತ ಸರ್ಕಾರ 1993ರಲ್ಲೆ ಕಲಾಕ್ಷೇತ್ರ ಫೌಂಡೇಶನ್ ಮಸೂದೆಯನ್ನು ಮಾಡಿ, ಮಾನ್ಯತೆ ನೀಡಿ ಸ್ವಾಯತ್ತ ವಿಶ್ವವಿದ್ಯಾನಿಲಯವನ್ನಾಗಿ ಮಾಡಿತು. ಒಂದಾನೊಮ್ಮೆ ಕಾಲದಲ್ಲಿ ಯುಜಿಸಿ ಸಮಿತಿ ಕಲಾಕ್ಷೇತ್ರಕ್ಕೆ ಆಗಮಿಸಿ ಬಂದು ಕೇಳಿದಾಗಲೂ ವಿಶ್ವವಿದ್ಯಾನಿಲಯದ ಕಲ್ಪನೆ ಕಲಾಕ್ಷೇತ್ರಕ್ಕೆ ಬೇಡವೇ ಬೇಡ ಎಂದು ತಿರಸ್ಕರಿಸಿದ ರುಕ್ಮಿಣಿ ಎಲ್ಲಿ.., ನಂತರದ ಬೆಳವಣಿಗೆಗಳಲ್ಲಿ..?

ಇಂದಿಗೂ ತಿರುವಾನ್ಮಿಯೂರ್‌ನ ಆ 100 ಎಕರೆ ವ್ಯಾಪ್ತಿಯಲ್ಲಿ ಅವರು ಬೆಳೆಸಿದ ವಿಶಾಲ 5 ಸಂಸ್ಥೆಗಳನ್ನು ಕಾಣಬಹುದು. ಭರತ ಕಲಾಕ್ಷೇತ್ರ ಆಡಿಟೋರಿಯಂ, ಶಾಲೆ, ಕಾಲೇಜು, ಹಾಸ್ಟೇಲ್, ಹೊರಾಂಗಣ ವೇದಿಕೆ, ಸಂಶೋಧನಾ ಕೇಂದ್ರ, ಕಲಾಂಕಾರಿ, ವಸ್ತು ಸಂಗ್ರಹಾಲಯ.. ಹೀಗೆ ಕಲಾಸಕ್ತರ, ಕಲಾವಿದರ, ಕಾಲಾಪೇಕ್ಷಿಗಳ ಅತ್ಯುಚ್ಛ ತವರೆಂದೇ ಗುರುತಿಸಲ್ಪಡುತ್ತದೆ. ಕಲಾಕ್ಷೇತ್ರ ಸ್ಥಾಪನೆಯ ನೆನಪಾಗಿ ಪ್ರತೀ ಡಿಸೆಂಬರ್ ಕೊನೆಯ ವಾರದಿಂದ 15 ದಿನ ಪರ್ಯಂತ ಕಲಾಕ್ಷೇತ್ರ ಉತ್ಸವ ಜರುಗುತ್ತದೆ. ವೀಣಾ ಕೃಷ್ಣಮಾಚಾರ್ಯರು ನಟಭೈರವಿಯ ತಿಲ್ಲಾನವೊಂದನ್ನು ರುಕ್ಮಿಣಿಗೆ ಅರ್ಪಣೆ ಮಾಡಿ ನೃತ್ಯವೇ ರುಕ್ಮಿಣಿಯವರ ನೃತ್ಯ ಪುನರುಜ್ಜೀವನ ಕಾರ್ಯವನ್ನು ಸ್ತುತಿಸುವಂತೆ

ಸಾಹಿತ್ಯ ರಚಿಸಿದ್ದರು. ಅಂತಹ ಅರ್ಪಣೆಯ ನಂತರದ್ದು ನವದೆಹಲಿಯ ಸಮಕಾಲೀನ ಸಂಸ್ಕೃತಿಗಳ ಕೇಂದ್ರದಿಂದ ರುಕ್ಮಿಣೀದೇವಿಯ ಕುರಿತಂತೆ 2001ರಲ್ಲಿ ನಡೆದ ಮೊದಲ ರಾಷ್ಟ್ರಿಯ ವಿಚಾರ ಸಂಕಿರಣ. 2004ರಲ್ಲಿ ರುಕ್ಮಿಣೀ ಅವರ ಜನ್ಮ ಶತಾಬ್ದಿ ಆಚರಿಸಲಾಗಿದೆ. ಅವರ ಬಗ್ಗೆ ಲೇಖನಗಳು, ಸಂಶೋಧನೆಗಳು, ಪುಸ್ತಕಗಳು, ಜೀವನಗಾಥೆ–ಅನುಭವಕಥನಗಳು ಮುದ್ರಣಗೊಂಡಿವೆ. ಏಪ್ರಿಲ್ 2005ರ ತರುವಾಯ ಅವರ ಶಿಷ್ಯೆ ಲೀಲಾ ಸಾಮ್ಸನ್ ಅವರ ಮುಂದಾಳತ್ವದಲ್ಲಿ ಕಲಾಕ್ಷೇತ್ರ ಮುಂದುವರಿಯುತ್ತಲಿದೆ.

ಆದರೆ ಇವೆಲ್ಲಾ ಸುಲಭಕ್ಕೆ ದಕ್ಕಿದ್ದಲ್ಲ... ವಿದೇಶಿ ಹಿರಿಯನೊಂದಿಗೆ ಮದುವೆ, ನಂತರ ಎಳೆವಯಸ್ಸಿಗೆ ಪತಿಯ ಮರಣ, ಸಂದಿಗ್ಧ ಸಂದರ್ಭದಲ್ಲಿ ಕಲಾಕ್ಷೇತ್ರದ ಸ್ಥಳಾಂತರ, ಥಿಯೋಸೋಫಿ ಮುಖಂಡರೊಂದಿಗೆ ತಿಕ್ಕಾಟ, ಹಲವು ಸವಾಲುಗಳು, ಕೊನೆಗಾಲದಲ್ಲೂ ಕಾಡಿದ ಕಲಾಕ್ಷೇತ್ರದ ಅಸ್ಥಿರತೆ.. ಹೀಗೆ ಜೀವನದ ಪ್ರತಿಯೊಂದು ಹಂತದಲ್ಲೂ ಏಳುಬೀಳನ್ನು ಕಂಡವರು. ಆದರೆ ಇವೆಲ್ಲಾ ಹಂತಕ್ಕೂ ತಾನು ನಡೆಯಬೇಕೆಂದಿದ್ದ ಪಥದೆಡೆಗೆ ದೃಢನಿರ್ಧಾರ, ಅಚಲವಿಶ್ವಾಸ, ತಾರ್ಕಿಕ ಆಲೋಚನೆಗಳೇ ಅವರನ್ನು ರೂಪಿಸಿದ್ದು. ಹಾಗೆಂದು ಅವರು ಈ ಕ್ಷೇತ್ರಕ್ಕೆ ಕಾಲಿಟ್ಟಿದ್ದೂ ಕೂಡಾ ತಾನೇನೋ ಮಾಡಿಬಿಡುವೆ ಎಂಬ ಹುಂಬತನವೋ ಅಥವಾ ಜಂಭದಿಂದಲೋ ಅಲ್ಲ. ರಾಷ್ಟ್ರೀಯತೆಯ ಉದ್ದೀಪನ ಮತ್ತು ಥಿಯೋಸೋಫಿಯ ಪ್ರತಿನಿಧಿಯಾಗಿ ತನ್ನನು ಗುರುತಿಸಿಕೊಳ್ಳಲು ಬಯಸಿದರೇವಿನಾ ಸುಧಾರಕಿಯಾಗಲ್ಲ. ಕಲೆಯು ಸಾಮಾಜಿಕ ಉದ್ದೇಶಕ್ಕೆ ದುಡಿದವರು. ಸಾದಿರ್‌ನ್ನು ಭರತನಾಟ್ಯವೆಂದು ಸಾಂಸ್ಥೀಕರಣ ಮಾಡಿ ಜೀವನದ ಬೃಹತ್ ಅವಕಾಶದೊಳಗೆ ಅದನ್ನಿರಿಸಿ ಕಲೆಗೂ ಜೀವನಕ್ಕೂ ಸಂಬಂಧವಿದೆಯೆಂದು ತೋರಿಸಿದ್ದು ರುಕ್ಮಿಣಿ. ಅವರ ಬಗೆಗಿನ ಓದು ಕೇವಲ ಇತಿಹಾಸವಾಗಿ ಪ್ರಸ್ತುತವಲ್ಲ; ಬದಲಾಗಿ ಇಂದಿನ ಮತ್ತು ಸುಧಾರಣೆಯ ಸಂದರ್ಭದಲ್ಲಾದ ಸಂಯೋಜನೆ, ನಿಲುವು, ದಿಗ್ದರ್ಶನ ಚರ್ಚೆಗಳಿಗೆ ವೇದಿಕೆ.



ಇಂದು ಎಲ್ಲೆಲ್ಲಿ ಭರತನಾಟ್ಯದ ಪ್ರದರ್ಶನ, ಕಲಿಕೆಯಿಂದು ಕಂಡು ಬರುತ್ತದೋ ಅಲ್ಲೆಲ್ಲಾ ರುಕ್ಮಿಣಿಯನ್ನು ಸ್ಮರಿಸಬೇಕು. ಅಂತಹುದೊಂದು ಜಾಗತಿಕ ಮಾನ್ಯತೆ; ತೋರಿದ ಭವಿಷ್ಯದ ಬೆಳಕಿಂಡಿ ಸಾಮಾನ್ಯವೇನಲ್ಲ. 'ಉತ್ತಮ ಸಂಸ್ಥೆಗಳಿಂದ ಒಳ್ಳೆಯ ಪ್ರೇಕ್ಷಕರನ್ನು ಹುಟ್ಟುಹಾಕಬಹುದು. ಇಲ್ಲವಾದರೆ ಮರಳುಗಾಡಿನ ಸಾವೇ ಗತಿಯಾಗುತ್ತದೆ ಕಲೆಗೆ' ಎಂದ ರುಕ್ಮಿಣಿ ಅದನ್ನು ಶತಮಾನಗಳುದ್ದಕ್ಕೂ ನೆನೆಯುವಂತೆ ಸಾಧಿಸಿ ತೋರಿದರು. ಬಹುಷಃ ಸೌಲಭ್ಯಗಳಿಲ್ಲದ ಕಾಲವು ಹೆಚ್ಚು ಹೆಚ್ಚು ಸಾಧನೆಯ ಅಗತ್ಯಗಳನ್ನು ಹುಟ್ಟುಹಾಕುತ್ತದೆ ಎಂಬ ಮಾತು ಸುಳ್ಳಲ್ಲ. ಹಾಗೆಂದು ಅವರ ಶೋಧನೆ ಸಂಗೀತ ನೃತ್ಯಕ್ಕಷ್ಟೇ ಮೀಸಲಾಗಿರದೆ ಸಂಸ್ಕೃತಿಯ ಒಡಕುಗಳನ್ನು ಜೋಡಿಸಲು, ವಿಭಿನ್ನ ತಂತುಗಳನ್ನು ಕೂಡಿಸಲು ಸಂವೇದನೆಗಳಿತ್ತು ಎಂಬುದು ಗಮನಿಸಬೇಕಾದ ಮುಖ್ಯ ಅಂಶ. ಇದರಿಂದಲೋ ಏನೋ ಸಾವಕಾಶದಲ್ಲಿ ನಿಡಿದಾದ ಉಸಿರಾಡುವ ಸ್ಥಿತಿ ನಮ್ಮದಾಗಿದೆ. ಅವರು ತಳದಿಂದ ಬೆಳೆದು ರೆಂಬೆಕೊಂಬೆಗಳನ್ನು ಹಬ್ಬಿಸಿದ ಕಾರಣಕ್ಕೇ ನೃತ್ಯವೆಂಬ ವಿಶಾಲ ವೃಕ್ಷದ ಕೆಳಗಡೆ ಕುಳಿತು ನಲಿಯುವಂತಾಗಿದೆ. ನೋವು ನುಂಗಿ ಕಲಾಸಾಮ್ರಾಜ್ಯದ ಪ್ರಾಣಿ ಪಕ್ಷಿಗಳಿಗೆ ಆಶ್ರಯ ನೀಡಿದ ಕಾರಣಕ್ಕೇ ಕಲಾವೃಕ್ಷದ ಹೂವು ಹಣ್ಣುಗಳು ಕಣ್ಣಿಗೆ ಬೀಳುವಂತಾಗಿದೆ.

ವಳವೂರ್, ಪಂದನಲ್ಲೂರಿನಂತೆ ಇತಿಹಾಸವಾಗಲೀ, ಖ್ಯಾತಿವೆತ್ತವರು ಇಲ್ಲಿ ಆಗಿಹೋಗದಿದ್ದರೂ;



ರುಕ್ಮಿಣಿ ತಮ್ಮ ಹೊಸತೆನಿಸುವ ಯೋಚನೆ ಮತ್ತು ಅವರ ಪ್ರಭಾವಯುತ ವ್ಯಕ್ತಿತ್ವದಿಂದ ಕ್ರಾಂತಿಯ ಸ್ಪರ್ಶಕೊಟ್ಟರು. ಅವರು ಬದಲಾವಣೆಯ ದಿಕ್ಕಿನ ಮೊದಲ ಗುರು. ವಿಶೇಷವೆಂದರೆ ಅವರು ಕಲೆಗೆ ಕಾಲಿಡುವವರೆಗೂ ದೇವದಾಸಿಯರು, ನಟ್ಟುವ ವಂಶದವರಷ್ಟೇ ನೃತ್ಯದ ವ್ಯಾಪ್ತಿಯಲ್ಲಿದ್ದವರು. ರುಕ್ಮಿಣಿ ಒಬ್ಬರೇ ಮೊದಲ ಬ್ರಾಹ್ಮಣ ಮಹಿಳೆ. ನೃತ್ಯವನ್ನು ಬ್ರಾಹ್ಮಣೀಕರಣ ಮಾಡಿದರು ಎಂಬೆಲ್ಲಾ ಅಪವಾದ ಅವರ ಮೇಲಿದ್ದರೂ ಸ್ವಭಾವತಃ ಸ್ವಚ್ಛತೆಯ ವಿಚಾರಗಳಿಗೆ ಆಸ್ಥೆ ನೀಡುವ ಬ್ರಾಹ್ಮಣ ಪರಂಪರೆಯನ್ನೇ ನೃತ್ಯದೊಳಗೆ ತಂದರೇ ವಿನಾ ಮಡಿವಂತಿಕೆಯನ್ನಲ್ಲ. ಅಷ್ಟಕ್ಕೂ ಜಾತಿ–ಮತ–ಧರ್ಮಗಳ ಮಡಿವಂತಿಕೆಯ ಕಟ್ಟುಪಾಡು ಅವರನ್ನೆಂದು ಹಿಂಬಾಲಿಸಲಿಲ್ಲ. ಯಾವ ಜಾತಿಯೇನು, ಯಾವ ಪಂಗಡವೇನು?–ಮಡಿವಂತಿಕೆಯ ಕಟ್ಟುಪಾಡಿಗೆ ಅದರ ಹಂಗಿಲ್ಲ. ಇಲ್ಲವಾದರೆ ದೇವದಾಸಿ ಪರಂಪರೆಯಲ್ಲಾದ ಅಪಸವ್ಯಗಳಿಂದ ಕಲೆ ನರಳಾಡಿ ಬಹಿಷ್ಕೃತಗೊಳ್ಳುವ ಕಾಲವಾದರೂ ಹೇಗೆ ಪ್ರಾಪ್ತವಾದೀತು? ಕಲೆಯನ್ನು ರೂಢಿಸಿಕೊಳ್ಳುವುದು ಒತ್ತಟ್ಟಿಗಿರಲಿ ನೋಡುವುದಕ್ಕೂ ಬರುತ್ತಿರಲಿಲ್ಲವೆಂದರೆ ಅಂದಿನ ಕಾಲದ ಸನ್ನಿವೇಶ ಎಷ್ಟೊಂದು ಬರ್ಬರವಾಗಿರಬೇಡ! ಹಾಗೆ ನೋಡಿದರೆ ಮಡಿವಂತಿಕೆಯ ಗೂಡೆಂದೇ ಜರಿಯುವ ಬ್ರಾಹ್ಮಣ ಜಾತಿಯಿಂದಲೇ ಕಲೆಯ ಮೇಲಿದ್ದ ಮಡಿವಂತಿಕೆಯನ್ನು ತೆಗೆದುಹಾಕಲು ಮಹಿಳೆಯೊಬ್ಬಳು ಬರಬೇಕಾಯಿತು; ನಂದರ ಅಧಿಕಾರ ಶಾಹಿಯನ್ನು ಒದ್ದೋಡಿಸಲು ಬಂದ ಚಾಣಕ್ಯನಂತೆ. ಇಲ್ಲಿ ಆಕೆಯದ್ದು ಕಾರಣಶಕ್ತಿ.

ಇನ್ನೂ ವಿಶೇಷವೆಂದರೆ ಬ್ರಾಹ್ಮಣರ ಮೇಲಿದ್ದ ಅಂದಿನ ಗೌರವದಿಂದಾಗಿ ಬ್ರಾಹ್ಮಣರೇ ಅದರಲ್ಲೂ ಮಹಿಳೆಯೇ ನೃತ್ಯಕ್ಕೆ ಕಾಲಿಡುತ್ತಾರೆ ಎಂದರೆ 'ಸದಿರ್' ನೃತ್ಯವರ್ಗಕ್ಕೆ ಜಾತಿಯ ಹಂಗಿಲ್ಲ ಎಂಬುದು ಸಾರ್ವಕಾಲಿಕವಾಗಿ ಪ್ರಸ್ತುತವಾಗುತ್ತಾ ಹೋಯಿತು. ಆಸಕ್ತರೆಲ್ಲರೂ ಕಲೆಯ ಪ್ರವೇಶ ಪಡೆದು ಆ ಭೂಮಿಕೆಯನ್ನು ಜಾತಿ–ಮತ–ವರ್ಗಗಳ ಹಂಗಿಲ್ಲದಂತೆ ಮಾಡುವ ಹಾಗಾಯಿತು. ಅಷ್ಟಾಗ್ಯೂ ಬ್ರಾಹ್ಮಣ್ಯದ ಜಾತಿಯ ಮಡಿವಂತಿಕೆಯನ್ನೂ ಕಳಚಿ ಕಲಾಪ್ರೇಮಿ ವಿದೇಶಿ ಕ್ರೈಸ್ತ ವಯಸ್ಕನೊಂದಿಗೆ ಮದುವೆಯಾದದ್ದು ಅಂದಿನ ಮಟ್ಟಿಗಂತೂ ಸಾಮಾಜಿಕ ಕ್ರಾಂತಿಯೂ ಆಗಿತ್ತು. ಅದಕ್ಕೇ ಅಂದಿದ್ದು ರುಕ್ಮಿಣಿ ಅವರದ್ದು ಹೂವಿನ ಹಾದಿಯಲ್ಲ. ಆದರೂ ಹಾದಿಯಲ್ಲಿ ಎದುರಾದ ಕಲ್ಲುಗಳನ್ನು ಕುಟ್ಟಿಪುಡಿಮಾಡುವ 'ವಜ್ರದೇಹಿ' ಅವರು ಎಂದರೆ ಅದು ಅವರ ಶಕ್ತಿಸಂಪನ್ನತೆಯ ತುರುಬಿಗೆ ಸಲ್ಲಿಸಬಹುದಾದ ಚಿಕ್ಕ ಮಲ್ಲಿಗೆ ಮಾಲೆಯಷ್ಟೇ.

ಕಲೆಯಲ್ಲಿ ಅವರು ತಂದ ಮಾರ್ಪಾಡುಗಳೂ ಕ್ರಾಂತಿ. ಆದರೆ 'ಗಿಣಿಪಾಠ'ಕ್ಕೆ ಪ್ರಾಶಸ್ತ್ಯ ನೀಡುವುದು ಅವರ ಜಾಯಮಾನಕ್ಕೇ ಬಂದಿರಲಿಲ್ಲ. ಬ್ಯಾಲೆ, ಕಥಕಳಿಯ ಸಂಪರ್ಕದಲ್ಲಿ ತಮ್ಮ ಕಲ್ಪನೆಗೆ ನಿಲುಕಿದ ಸಂಗತಿಗಳನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ಅದನು ಪರಂಪರೆ ಎಂಬ ಹೆಸರಿನಲ್ಲಿ ಸೋಗುಹಾಕದೆ ತಮ್ಮ ಅಭಿವ್ಯಕ್ತಿಯ ರೂಪಕ್ಕೆ ಇತ್ತ ನೂತನ ಸ್ಪರ್ಶವೆಂಬಂತೆ ಕಂಡರು. ಕಲೆಯ ವಿಸ್ತಾರವನ್ನು ಉಳಿಸುವುದು ಅವರ ಕಾಯಕವಾಗಿತ್ತೇ ವಿನಾ ಅನುಕರಣೆಯ ಉದ್ದೇಶ ಅವರಿಗಿರಲಿಲ್ಲ. ಅನುಕರಣೆಯ ಉದ್ದೇಶ ಇದ್ದಿದ್ದರೆ ಅವರು ಹೊಸತೆನಿಸುವ ಪ್ರಯೋಗಗಳನ್ನಾಗಲೀ, ಆಹಾರ್ಯ ಮತ್ತು ವಾಚಿಕಾಭಿನಯ ನಿರೂಪಣೆಯ ಬದಲಾವಣೆಯನ್ನಾಗಲೀ ತರಲು ಸಾಧ್ಯವಾಗುತ್ತಿರಲಿಲ್ಲ. ದೇವದಾಸಿಯರ ಅಪಸವ್ಯಗಳನ್ನೇ ಒಪ್ಪಿಕೊಳ್ಳಬೇಕಾದ ಕಾಲವಾಗಿದ್ದರೂ ಭಕ್ತಿಯನ್ನು ನೃತ್ಯಕ್ಕೆ ಹೊಂದುವಂತೆ ಮಾಡಿ ಉದ್ದಾತೀಕರಣಗೊಳಿಸಿ ಭರತನಾಟ್ಯವೆಂದು ನೂತನ




**ಭಾರತ ಸರ್ಕಾರದಿಂದ ರುಕ್ಮಿಣಿದೇವಿ ಸ್ಮರಣಾರ್ಥ ಬಂದ ಅಂಚೆಚೀಟಿಗಳು**

ಅಭಿದಾನವನ್ನಿತ್ತದ್ದರ ಹಿಂದೆ ಇದ್ದದ್ದು ಕೇವಲ ಕಲೆಯ ಉಳಿವು ಬೆಳವಿಗೆ ಹೂಡಬಲ್ಲ ತಂತ್ರ ಮಾತ್ರ.

ವಿಪರ್ಯಾಸವೆಂದರೆ ಅವರ ಆಲೋಚನೆಗಳು ಯಾವುದೇ ವರ್ಗಕ್ಕೆ ಸೇರದೆ ಪ್ರಭಾವಳಿ ಮಾತ್ರ ಉಳಿದುಕೊಂಡಿದ್ದು ಭರತನಾಟ್ಯವೆಂಬುದು ಸದಿರ್‌ನ ಹೊಸ ರೂಪವಷ್ಟೇ ಎಂಬ ಪ್ರವೃತ್ತಿಯೇ ಬೆಳೆದು ಬರದೆ ಬ್ರಹ್ಮದೇವರ ಕೈಯ್ಯಲ್ಲಿ ಸೃಷ್ಟಿಯಾದ ನಾಟ್ಯಶಾಸ್ತ್ರದ ಅಪರಾವತಾರ ಎಂಬ ಮೂಢಕಲ್ಪನೆ ಬೆಳೆದುಬಿಟ್ಟಿದೆ. ಪಂದನಲ್ಲೂರಿನ ಮೂಲ ಪಂಪರೆಗೆ ಅವರಿತ ಹೊಸ ಸ್ಪರ್ಶದ ಫಲವಾಗಿ ಹೊಸ ಆಲೋಚನೆಗಳ ಹರಿಕಾರನೆನಿಸಿದ ಕಲಾಕ್ಷೇತ್ರ ಶೈಲಿ ಇಂದಿಗೆ ಬಹಳ ಕಠಿಣವೆನಿಸುವ ತಿದ್ದಲಾರದ ಕಲಾವಿದರ ಸಹಜಕಲಾಸ್ವಾತಂತ್ರ್ಯಕ್ಕೆ ತಡೆಯನ್ನೇ ನಿರ್ಮಿಸುತ್ತಿರುವ ಕಟ್ಟಾಸಂಪ್ರದಾಯೀ ಶೈಲಿಯೆನಿಸಿದೆ. ಹಾಗಾಗಿ ಇಂದಿಗಿದು ಅದೆಷ್ಟೇ ಹೆಸರಾಂತ ನಡೆ ಹೊಂದಿದ್ದರೂ ನಿಂತ ನೀರಾದ ಭಾವನೆ. ಇಂದಿಗೆ ಅವರ ಬಹಳಷ್ಟು ಅನುಯಾಯಿಗಳು ರುಕ್ಮಿಣಿದೇವಿ ಏನು ಮಾಡಿದ್ದರೋ ಅದನ್ನು ಒಂದಿಂಚೂ ಬದಲಾಯಿಸದೆ ಕಣ್ಮುಚ್ಚಿ ಹಾಗೆಯೇ ಪರಂಪರೆಯಂತೆ ಕಾಪಿಡುವುದರಲ್ಲೇ ರಸವಿಹೀನವಾಗುತ್ತಿದೆ ಎಂಬುದು ಸುಳ್ಳಲ್ಲ. ರುಕ್ಮಿಣಿ ನಂಬಿದ 'ಸತ್ಯಂ ಶಿವಂ ಸುಂದರಂ' ಕೇವಲ ಪಠ್ಯಪುಸ್ತಕ ಅಥವಾ ಬಾಯಿಮಾತುಗಳಿಗಷ್ಟೇ ಸೀಮಿತವಾಗಿ; ಕಲೆಯ ನಿಜವಾದ ಮೌಲ್ಯಗಳು, ಸೃಷ್ಟಿಶೀಲವಾದ ಆಲೋಚನೆ, ವ್ಯುತ್ಪತ್ತಿ, ಔಚಿತ್ಯಗಳು ಮೂಲೆಗುಂಪಾಗುತ್ತಾ ಸಾಗಿವೆ. ಕಲೆಯನ್ನು ಜೀವನದೊಂದಿಗೆ ಸಮೀಕರಿಸುವ ಹಾದಿಗಳು ಜಡ್ಡುಗಟ್ಟಿವೆ.


ಮಾರ್ಚ್ 12, 1968ರಲ್ಲಿ ಜಾಕೀರ್ ಹುಸೇನ್ ಅವರಿಂದ 'ಪ್ರಾಣಿಮಿತ್ರ' ಪ್ರಶಸ್ತಿ

ಇದಕ್ಕೆ ವೈರುಧ್ಯವೆಂಬಂತೆ ಇವತ್ತಿಗೆ ಅವರು ಸುಧಾರಣೆ ತಂದ ಕಲೆಯನ್ನು ಕಲೆಯೇ ಅಲ್ಲ ಎಂದು ಹೇಳುವವರಿದ್ದಾರೆ. ಆದರೆ ಯಾವುದಕ್ಕೆ ಅರ್ಥವಿಲ್ಲವೋ, ಪೊಳ್ಳೋ – ಅದನ್ನು ನಂಬಲು ನಿರಾಕರಿಸುತ್ತಿದ್ದ, ಅಂಧವಾಗಿ ಒಪ್ಪುವುದಕ್ಕೆ ವಿರೋಧವಿದ್ದ, ಮೂಢನಂಬಿಕೆಗಳನ್ನು ಕಡೆಗಣಿಸುತ್ತಿದ್ದ ಅವರ ಮುಂದಿನ ತಲೆಮಾರು ಅವರಿದ್ದಂತೆಯಿಲ್ಲ. ಹಾಗಾಗಿ ಇಂದಿನ ಭರತನಾಟ್ಯದ ಅಭಿವ್ಯಕ್ತಿಯನ್ನು ನೋಡಿಕೊಂಡು ರುಕ್ಮಿಣಿ ಅವರ ಪ್ರಯತ್ನಗಳನ್ನು ಹೀಗಳೆಯುವುದು ಸಭ್ಯತೆಯಲ್ಲ.

ರುಕ್ಮಿಣಿ ಅವರಿಗೆ ವಿದ್ವಾಂಸರು ಬಂದು ತಂಗಿ ಅಧ್ಯಯನ ಮಾಡಲು ಸೂಕ್ತ ವಸತಿಗೃಹದ ನಿರ್ಮಾಣ ಮಾಡಬೇಕೆಂಬ ಆಸೆಯಿತ್ತು. ಆದರೆ ಅವರ ನಿಧನದ ನಂತರ ಅಷ್ಟಾಗಿ ಯಾರೂ ಅದನ್ನು ಗಮನಿಸಲಿಲ್ಲ. ಆದರೆ ಅವರು ಬದುಕಿರುವವರೆಗೆ ಅವರ ಆಲೋಚನೆಗಳಿಗೆ ಹೊಂದುವ ಒಂದಷ್ಟು ಎಂಜಿನಿಯರಿಂಗ್ ಪ್ಲಾನ್‌ಗಳು ಬಂತಷ್ಟೆ ಹೊರತು, ತದನಂತರ ಅವರ ಯೋಚನೆಯೋ ಪಾದಿಯಲ್ಲೇ ಕಾರ್ಯಗತವಾಗಿದ್ದು ಕಡಿಮೆ. ಗ್ರಂಥಾಲಯ–ವಸ್ತುಸಂಗ್ರಹಾಲಯ ನಿರ್ಮಾಣಕ್ಕೆಂದು ಭಾರತ ಸರ್ಕಾರ 20 ಲಕ್ಷ ದೇಣಿಗೆ ಕೊಟ್ಟಿತಾದರೂ ಅದೂ ಕೂಡಾ ಬಹಳ ವರ್ಷಗಳ ಕಾಲ ಬಳಕೆಯಾಗಲಿಲ್ಲ. ತೀರಾ ಇತ್ತೀಚೆಗಿನ ದಶಕಗಳಲ್ಲಿ ಅದರ ಬಗ್ಗೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

ವಾರಣಾಸಿಯು ಮಾಲಿನ್ಯದಿಂದ ತುಂಬಿದರೂ ಭಕ್ತರು ಅಲ್ಲಿಗೇ ಯಾತ್ರಾರ್ಥಿಗಳಾಗಿ ತೆರಳುತ್ತಾರೆ. ಅದುವೇ ಸ್ಥಳ ಮಹಿಮೆ. ಪುರಾತನರ ಶ್ರದ್ಧೆ, ಕರ್ತವ್ಯದ ವಾಸನಾಫಲ ಇಂದಿಗೂ ಇದೆ. ಅಂತಹ ಸ್ಥಳಮಹಿಮೆ ಕಲಾಕ್ಷೇತ್ರದ್ದು ಕೂಡಾ. ಕಲೆಯ ರಾಷ್ಟ್ರೀಯ ಸಂಸ್ಥೆ, ಸಂಸ್ಕೃತಿಯ ಕೇಂದ್ರಬಿಂದು, ಕಲಾತಾಣ, ಅರಮನೆ ಹೀಗೆ ಕಲಾಕ್ಷೇತ್ರವನ್ನು ನೋಡುಗರು ಬಗೆಬಗೆಯಾಗಿ ವರ್ಣಿಸುತ್ತಾರೆ. ತಮಿಳುನಾಡಿನ ಪ್ರವಾಸೀ ತಾಣಗಳಲ್ಲಿಯೂ ಒಂದಾಗಿರುವ ಸಮುದ್ರತಡಿಯ ಬಳಿಯ ಕಲಾಕ್ಷೇತ್ರದ ರಂಗಮಂಚದ ತುಂಬೆಲ್ಲ ಮಹಿಳೆಯೊಬ್ಬಳ ಧೈರ್ಯ, ಆತ್ಮಶಕ್ತಿ, ಚಿಕಿತ್ಸಕ ನೋಟದ ಫಲವಾಗಿ ನಿಂತ ಕಲೆಯ ನಟುವಾಂಗ ಇಂದಿಗೂ ಕೇಳುತ್ತಿರುತ್ತದೆ.

ಅವರಿಂದು ನಮ್ಮೊಡನಿಲ್ಲ. ಮರೆಯಾಗಿ ಸುಮಾರು 25 ವರ್ಷಗಳು ಕಳೆದಿವೆ. ಆದರೇನು..,

ಅವರ ಚೈತನ್ಯ ಉಳಿದಿದೆ. ದೇಹ ಪಂಚಭೂತಗಳಲ್ಲಿ ಒಂದಾಗಿ ಆಕೆಯು ಬೆಳಗಿದ ಜ್ಯೋತಿಯೊಂದೇ ಪ್ರಕಾಶಿಸುತ್ತಿದೆ. ಅವರ ಶಿಷ್ಯರು ಇಂದಿಗೂ ದೀಪದಿಂದ ದೀಪ ಹಚ್ಚುವಂತೆ ಜಗತ್ತಿನಾದ್ಯಂತ ಕಲಾಕ್ಷೇತ್ರದ ಮೌಲ್ಯಗಳನ್ನು ಪಸರಿಸುತ್ತಲಿದ್ದಾರೆ.

ಭಾರತೀಯತೆಗಾಗಿ ಸ್ವಾತಂತ್ರಪೂರ್ವ ಮತ್ತು ಸ್ವಾತಂತ್ರ್ಯಾನಂತರದಲ್ಲೂ ದುಡಿದು, ತುಂಬುಜೀವನ ನಡೆಸಿ ದೇಶಸೇವೆಗೆ ಅನ್ವರ್ಥನಾಮವೆನಿಸುವಂತೆ ಬದುಕಿದವರು ರುಕ್ಮಿಣೀದೇವಿ ಅರುಂಡೇಲ್. ಹಾಗೆಂದು ರುಕ್ಮಿಣೀ ಎಂದಿಗೂ ಘೋಷಣೆ ಕೂಗುವ ಮಹಿಳಾವಾದಿಯಾಗಲಿಲ್ಲ, ಮೌನವ್ರತವನ್ನಾಚರಿಸುತ್ತಾ ಪ್ರಾಣ ಬಿಡಲೂ ಇಲ್ಲ. ಅಹಿಂಸೆಯನ್ನು ಉಸಿರಾಡುತ್ತಲಿದ್ದರು. ಆದರೆ ಬದುಕಿನುದ್ದಕ್ಕೂ ಕ್ರಾಂತಿಕಾರಿಯಾಗಿಯೇ ಇದ್ದರು. ಕ್ರಾಂತಿ ಎಂದರೇನು ಎಂಬುದನ್ನು ಸಾಧಿಸಿ ತೋರಿಸಿದರು. ಅವರ ಬದುಕು, ಮೌಲ್ಯ, ಕಲೆಯು ಎಂದೆಂದಿಗೂ ಎದೆಗಾರಿಕೆಯಿಂದ ಮಾಡಬಹುದಾದ ದೇಶಸೇವೆ, ಸಮೃದ್ಧ ಜೀವನ ಮತ್ತು ಅದರಿಂದೊದಗುವ ಔನತ್ಯದ ಪ್ರತೀಕ.

(ಮುಗಿಯಿತು) ■

ತಮಗಿದೋ ಪ್ರೀತಿಪೂರ್ವಕ ಆಹ್ವಾನ

## ಅಖಿಲ ಭಾರತೀಯ ನೃತ್ಯ ಸಂಶೋಧನ ಸಮ್ಮೇಳನ–2013

**ನೂಪುರ ಭ್ರಮರಿ ನೃತ್ಯ ಸಂಶೋಧಕರ ಚಾವಡಿಯ ಆಶ್ರಯದಲ್ಲಿ ಬೆಂಗಳೂರಿನ ಭಾರತೀಯ ವಿದ್ಯಾಭವನದ ಸಹಯೋಗದಲ್ಲಿ ಅಖಿಲ ಭಾರತೀಯ ನೃತ್ಯ ಸಂಶೋಧನ ಸಮ್ಮೇಳನ–2013ವು ಫೆಬ್ರವರಿ 15, 2013ರಂದು ಭಾರತೀಯ ವಿದ್ಯಾಭವನದ ಖಿಂಚಾ ಸಭಾಂಗಣದಲ್ಲಿ ಜರುಗಲಿದೆ. ದೇಶದ ನಾನಾ ಮೂಲೆಗಳಿಂದ ಶಾಸ್ತ್ರೀಯ, ದೇಶೀ ನರ್ತನ ಕಲೆಗಳ ಸಂಶೋಧಕರು, ಕಲಾವಿದರು ಆಗಮಿಸಲಿದ್ದು ; ದೇಶದಲ್ಲೇ ಈ ವಿನೂತನವಾದ ಪ್ರಯತ್ನಕ್ಕೆ ನೂಪುರ ಭ್ರಮರಿಯ ಬಳಗ ಮುಂದಾಗಿರುವುದಕ್ಕೆ ಅದ್ಭುತ ಶ್ಲಾಘನೆ ವ್ಯಕ್ತವಾಗಿದೆ. ಹಲವು ಸಂಶೋಧನಾಸಕ್ತರು ತಮ್ಮ ಸಂಶೋಧನ ಪ್ರಬಂಧಗಳನ್ನು ಮಂಡಿಸಲು ಕಾತುರರಾಗಿದ್ದಾರೆ. ಇದೇ ವೇಳೆಯಲ್ಲಿ ಭಾರತದಲ್ಲೇ ಮೊತ್ತಮೊದಲೆನ್ನಿಸುವಂತಹ ನೃತ್ಯ ಸಂಶೋಧನಾ ನಿಯತ ಕಾಲಿಕೆಯು ಐಎಸ್ಎಸ್ಎನ್ ಸಂಖ್ಯೆಯ ಜಾಗತಿಕ ಮಾನ್ಯತೆಯೊಂದಿಗೆ ಜನ್ಮ ತಾಳುತ್ತಲಿದೆ. ಕಿರಿಯರಿಗೆ ಬೌದ್ಧಿಕ ವಿಚಾರಸರಣಿಗಳನ್ನು ಬೆಳೆಸುವ ಸ್ಪರ್ಧಾದಿ ವಿಶೇಷ ಕಾರ್ಯಕ್ರಮಗಳ ಸಂಘಟನೆಯೂ ಪೂರ್ವಭಾವಿಯಾಗಿ ಜರುಗುತ್ತಲಿದ್ದು; ಹೆಸರಾಂತ ಸಂಶೋಧಕರು ನಮ್ಮನ್ನು ಹರಸಿ ಹಾರೈಸಲಿದ್ದಾರೆ. ನೂಪುರ ಭ್ರಮರಿಯ ವಿಶೇಷಾಂಕವು ನೂತನ ಪ್ರಯತ್ನಗಳ ನೆಲೆಯಲ್ಲಿ ಅನಾವರಣಗೊಳ್ಳಲಿದ್ದು ; ಪ್ರಶಸ್ತಿಪ್ರದಾನ ಕಾರ್ಯಕ್ರಮವೂ ಜೊತೆಗಿದೆ. ಸಂಜೆಯ ತಂಪಿನ ಹೊತ್ತಲ್ಲಿ ಸಂಶೋಧನೆಯಿಂದ ಚಿಮ್ಮಿದ ನೃತ್ಯಪ್ರಸ್ತುತಿಯೂ ಇದ್ದು; ನೃತ್ಯದ ಪಾಲಿಗೆ ವಿನೂತನವೆನಿಸುವ ಚಿಂತನೆಗಳು ಕಾಣ್ಕೆಯಾಗಲಿವೆ. ನಿಮಗೆಲ್ಲರಿಗೂ ಈ ವಿಶೇಷ ದಿನಕ್ಕೆ ಆತ್ಮೀಯ ಹಾರ್ದಿಕ ಪ್ರೀತಿಪೂರ್ವಕ ಸ್ವಾಗತ. ಸಮ್ಮೇಳನದಲ್ಲಿ ಪಾಲ್ಗೊಂಡು ಪ್ರಮಾಣಪತ್ರಗಳನ್ನು ಪಡೆದುಕೊಳ್ಳಬೇಕೆಂದಿರುವವರು ಪ್ರವೇಶಧನದೊಂದಿಗೆ ಮೊದಲೇ ನೋಂದಾವಣೆ ಮಾಡಿಕೊಳ್ಳತಕ್ಕದು. ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ. ಅಂತೆಯೇ ನೃತ್ಯಸಂಶೋಧಕರ ಚಾವಡಿಗೆ ಸದಸ್ಯರಾಗುವ ಇಚ್ಛೆಯಿದ್ದವರೂ ಸಂಪರ್ಕಿಸಬಹುದು. ಕಾರ್ಯಕ್ರಮದ ಸಂಪನ್ನತೆಗೆ ತಾವೆಲ್ಲರೂ ಕೈಜೋಡಿಸಿ ಪಾಲ್ಗೊಳ್ಳಬೇಕಾಗಿ ವಿನಂತಿ.**

**ಭಾರತೀಯ ನೃತ್ಯಗಳು–ವೇದ–ವಿದ್ಯೆ–ವಿಜ್ಞಾನ–ತಂತ್ರ–ಮಂತ್ರ–ಪುರಾಣ–ಯೋಗ–ವೈದ್ಯ–ಚಿಕಿತ್ಸಾ ವಿಧಾನಗಳಲ್ಲಿ ಕಂಡುಬರುವ ಹಸ್ತ –ಮುದ್ರೆಗಳ ಕುರಿತಾದ ; 1000ಕ್ಕೂ ಮಿಗಿಲು ಹಸ್ತ–ಮುದ್ರೆಗಳ ಆಳ ಅಧ್ಯಯನ, ಶ್ಲೋಕ, ಹಿನ್ನಲೆಯುಳ್ಳ, ಬಹುಮುಖೀ ಚಿಂತನೆಯ ಸಂದರ್ಶನ–ಸಮೀಕ್ಷೆ–ಪುರಾತನ ಗ್ರಂಥ ಪರಾಮರ್ಶನಗಳನ್ನೊಳಗೊಂಡ ವಿದ್ವಾಂಸರ ಮನ್ನಣೆ ಪಡೆದ ಮನೋರಮಾ ಅವರ ಸಂಶೋಧನಾ ಕೃತಿ.**

## ಮುದ್ರಾರ್ಣವ

**ಬೆಲೆ : 250/– ರೂ. ಸಂಪರ್ಕಿಸಿ. 99641 40927**

## “ನೃತ್ಯ ಮಾರ್ಗ ಮುಕುರ” ಕೃತಿ

ಮನೋರಮಾ ಬಿ.ಎನ್. ಅವರ ನೃತ್ಯಸಂವೇದನೆಯ ‘ಮುದ್ರಾರ್ಣವ’–ಹಸ್ತಮುದ್ರೆಗಳ ಸಂಶೋಧನಾ ಕೃತಿಯ ತರುವಾಯ ‘ಶ್ರೀ ಸಾನ್ನಿಧ್ಯ ಪ್ರಕಾಶನ’ದಿಂದ ಅನಾವರಣಗೊಂಡ ಮತ್ತೊಂದು ನೃತ್ಯ ಸಂವೇದನೆಯ ಕೃತಿ ‘ನೃತ್ಯಮಾರ್ಗ ಮುಕುರ’. ಭರತನಾಟ್ಯದ ಮಾರ್ಗ ಪದ್ಧತಿಯ ಮಜಲುಗಳನ್ನು, ನೃತ್ಯಾಂಗಗಳನ್ನು ದಾಖಲಿಸುವ, ಸಮಗ್ರ ಸಂಕ್ಷಿಪ್ತ ವಿವರವನ್ನೀಯುವ 160 ಪುಟಗಳ ಈ ಕೃತಿ, ಆಸಕ್ತ ಸಹೃದಯರ ಪಾಲಿಗೆ ಸಾಕಲ್ಯ ದೃಷ್ಟಿಯ ಅಧ್ಯಯನಸಾಮಗ್ರಿ. ಪುಸ್ತಕದ ಬೆಲೆ: 125ರೂ.

ಭರತನಾಟ್ಯ–ಭರತನ ನಾಟ್ಯಶಾಸ್ತ್ರ ಪ್ರಸ್ತುತ ಸಂದರ್ಭದಲ್ಲಿ ಗೊಂದಲವನ್ನು ಸೃಷ್ಟಿಸಿಕೊಂಡ ಪಾರಿಭಾಷಿಕ ಪದಗಳಾಗಿ ಮಾರ್ಪಟ್ಟಿವೆ. ‘ಇಂದಿನ’ ಭರತನಾಟ್ಯ ಎಂಬ ನೃತ್ಯಪದ್ಧತಿಗೂ ‘ಅಂದಿನ’ ಭರತನ ನಾಟ್ಯಶಾಸ್ತ್ರಗ್ರಂಥಕ್ಕೂ ಇರುವ ಸಂಬಂಧಗಳ ಬಗ್ಗೆ ಗಹನವಾದ ಚರ್ಚೆಗಳು ನಡೆಯುತ್ತಿದ್ದರೂ ತಾರ್ಕಿಕ, ತಲಸ್ಪರ್ಶಿಯಾದ ಅಧ್ಯಯನಗಳಾಗಿರುವುದು ಬೆರಳೆಣಿಕೆಯಷ್ಟು. ಈ ನಿಟ್ಟಿನಲ್ಲಿ ***‘ನೃತ್ಯ ಮಾರ್ಗ ಮುಕುರ’*** ಭರತನಾಟ್ಯ ನೃತ್ಯಮಾರ್ಗಕ್ಕೆ ಹಿಡಿದ ಕೈಗನ್ನಡಿಯೇ ಆಗಿರುವುದು ಅಭಿನಂದನೀಯ ಎಂದಿದ್ದಾರೆ ಪುಸ್ತಕಕ್ಕೆ ನಲ್ನುಡಿಯನ್ನಿತ್ತ ಖ್ಯಾತ **ಕಲಾ–ಇತಿಹಾಸ ಸಂಶೋಧಕಿ ಡಾ. ಕರುಣಾ ವಿಜಯೇಂದ್ರ.**

**ನೃತ್ಯ ಮಾರ್ಗ ಮುಕುರ ನನ್ನ ನೃತ್ಯ ಸಂಬಂಧೀ ಪುಸ್ತಕ ಸಂಗ್ರಹದಲ್ಲೊಂದು ಅಮೂಲ್ಯ ಪುಸ್ತಕವಾಗಿದೆ. ವಿದ್ವತ್ ದರ್ಜೆಯ ವಿದ್ಯಾರ್ಥಿಗಳಿಗೆ ಸರ್ಕಾರದ ಪಠ್ಯ ಇನ್ನೂ ಲಭ್ಯವಾಗಿಲ್ಲದ ಕಾರಣ ಈ ಪುಸ್ತಕ ಸಹಕಾರಿಯಾಗುವುದು ಸಾಧ್ಯವಿದೆ. ಸಂಶೋಧನಾಸಕ್ತರಿಗೆ ಮೂಲ ಆಕರ ಗ್ರಂಥಗಳ ಬಗೆಗಿನ ಸಾಕಷ್ಟು ಮಾಹಿತಿ ಇದರಲ್ಲಿ ಲಭ್ಯವಿರುವುದು ಒಂದು ಗಮನಾರ್ಹ ವಿಷಯ. ನಿಮ್ಮ ಪ್ರಯತ್ನ ಖಂಡಿತಕ್ಕೂ ಸ್ತುತ್ಯರ್ಹ. ನಿಮ್ಮಿಂದ ಇಂತಹ ಹೊಸ ಹೊಸ ಉಪಯುಕ್ತ ಪುಸ್ತಕಗಳು ಹೊರಬರುವಂತಾಗಲಿ.** *– ವಿದುಷಿ ಭ್ರಮರಿ ಶಿವಪ್ರಕಾಶ್, D/o ಉದ್ಯಾವರ ಮಾಧವ ಆಚಾರ್ಯ, ನಾದನೃತ್ಯ ಸ್ಕೂಲ್ ಆಫ್ ಡ್ಯಾನ್ಸ್.*

ಪುಸ್ತಕಗಳಿಗೆ ಬೆಂಗಳೂರು ಮತ್ತು ಮಂಗಳೂರಿನ ಸಪ್ನಾ ಬುಕ್ ಹೌಸ್, ಚೈತ್ರ ಬುಕ್‌ಹೌಸ್; ಅಂಕಿತ ಪುಸ್ತಕ–ಗಾಂಧೀಬಜಾರ್; ಗೋಖಲೆ ಸಂಸ್ಥೆ–ಬಸವನಗುಡಿ, ರಾಷ್ಟ್ರೋತ್ಥಾನ, ವೇದಾಂತ ಪುಸ್ತಕ–ಚಾಮರಾಜಪೇಟೆ, ಮಂಗಳೂರಿನ ಸಾಹಿತ್ಯ ಭಂಢಾರ, ನವಕರ್ನಾಟಕ ಪಬ್ಲಿಕೇಷನ್ ಅಥವಾ ನೂಪುರ ಭ್ರಮರಿ ಪತ್ರಿಕೆ, ಉಡುಪಿ ವಲಯದ ಪ್ರಸರಣಾ ಮುಖ್ಯಸ್ಥ ರಾಮಭಟ್ ಅವರನ್ನು ಸಂಪರ್ಕಿಸಬಹುದು.

**‘ನೃತ್ಯಮಾರ್ಗಮುಕುರ’ ಕೃತಿಯ ಮೌಲ್ಯವನ್ನು ಗುರುತಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2011ನೇ ಸಾಲಿನ 10,000ರೂ ಸಹಾಯಧನ ದೊರೆತಿದೆ.**

## ಚಂದಾ ವಿವರ

ನೂಪುರ ಭ್ರಮರಿ ಲಾಭಾಂಶದ ಬಗ್ಗೆ ಆಗ್ರಹವಿಲ್ಲದ ಪತ್ರಿಕೆಯಾದರೂ ಖರ್ಚು–ವೆಚ್ಚಗಳನ್ನು ಸರಿದೂಗಿಸುವುದು ಅಷ್ಟು ಸುಲಭದ ಮಾತಲ್ಲ ಎಂಬುದು ನಿಮಗೆ ತಿಳಿದೇ ಇದೆ. ಅಷ್ಟಕ್ಕೂ ಪ್ರಾರಂಭಿಕ ವರ್ಷಗಳಿಂದಲೂ ಚಂದಾ ವಿವರ ಕಡ್ಡಾಯವಾಗಿರಲಿಲ್ಲ; ಫಲವಾಗಿ ಎಷ್ಟೋ ಬಾರಿ ಸಂಚಿಕೆಗಳನ್ನು ಉಚಿತವಾಗಿಯೇ ಕಳಿಸಿಕೊಟ್ಟದ್ದಿದೆ. ಆದರೆ ಪತ್ರಿಕೆಗೆ ಅದರದ್ದೇ ಆದ ಜವಾಬ್ದಾರಿ, ಸಮಸ್ಯೆಗಳಿರುವ ಕಾರಣ ಉಚಿತವಾಗಿ ಕಳಿಸಿಕೊಡುವುದು ಅಥವಾ ಗೌರವಪ್ರತಿ ನೀಡುವುದು ಎಲ್ಲಾ ಸಂದರ್ಭದಲ್ಲಿ ಸಾಧ್ಯವಿಲ್ಲ. ಆದ್ದರಿಂದ ಕೆಳಕಂಡ ಚಂದಾವಿವರಗಳನ್ನು ಲಕ್ಷಿಸಿ 'ಸಂಪಾದಕರು, ನೂಪುರ ಭ್ರಮರಿ' ಹೆಸರಿಗೆ ಡಿ.ಡಿ/ಮನಿಯಾರ್ಡರ್‌ನಲ್ಲಿ ಮೊತ್ತವನ್ನು ಕಳಿಸಬೇಕೆಂದು ಕೋರುತ್ತೇವೆ. ಚೆಕ್ ಕಳಿಸುವುದಿದ್ದಲ್ಲಿ ಬ್ಯಾಂಕ್ ಕಮಿಷನ್ ಮೊತ್ತ 40/–ರೂ ಹೆಚ್ಚಿಗೆ ಸೇರಿಸಿ ಕಳಿಸಬೇಕೆಂದು ಮನವಿ. ಪತ್ರಿಕೆ, ಪ್ರತಿಷ್ಠಾನಕ್ಕೆ ಬೇರಾವುದೇ ಆದಾಯಮೂಲಗಳಿಲ್ಲದಿರುವುದರಿಂದ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಉದಾರ ದೇಣಿಗೆಗಳನ್ನು ನೀಡಲು ಆಸಕ್ತಿಯಿರುವವರನ್ನೂ ಆದರಪೂರ್ವಕವಾಗಿ ಸ್ವಾಗತಿಸುತ್ತೇವೆ..

ನೂಪುರ ಭ್ರಮರಿಯ ಹಿಂದಿನ ಸಂಚಿಕೆಗಳಲ್ಲಿ ಕೆಲವೇ ಕೆಲವು ಲಭ್ಯವಿವೆ. ಆಸಕ್ತರು ಲಭ್ಯತೆಯನ್ನನುಸರಿಸಿ ಖರೀದಿಸಿ ಪ್ರಯೋಜನ ಪಡೆದುಕೊಳ್ಳಬಹುದು. ಹಿಂದಿನ ಸಂಚಿಕೆಗಳ ಬಿಡಿಪ್ರತಿ ಬೆಲೆ– 20ರೂ. ; ವಿಶೇಷ ಸಂಚಿಕೆ –30ರೂ. ಆಜೀವ ಸದಸ್ಯರಾದಲ್ಲಿ ಅಥವಾ ಮುದ್ರಣ ನಿಧಿಗೆ ಸಹಕರಿಸಿದವರಿಗೆ ಸದಸ್ಯತ್ವದ ದಿನಾಂಕದಿಂದ ಮೊದಲ್ಗೊಂಡು ಆಜೀವ ಪರ್ಯಂತ ಪತ್ರಿಕೆಯನ್ನು ಕಳಿಸಿಕೊಡಲಾಗುವುದು. ಆಜೀವ ಸದಸ್ಯರು/ಮಹಾಪೋಷಕರು ಪತ್ರಿಕೆಯ ಒಟ್ಟಾರೆ ಬೆಳವಣಿಗೆಯ ಹಿನ್ನೆಲೆಯಲ್ಲಿಯೂ ಕೈಜೋಡಿಸಬಹುದಾಗಿದ್ದು; ಪತ್ರಿಕೆಗೆ ಸಂಬಂಧಿಸಿದ ಕಾರ್ಯಕ್ರಮ, ನೀತಿ–ನಿಯಮ ಇತ್ಯಾದಿ ರೂಪುರೇಷೆಗೂ ಜವಾಬ್ದಾರಿಯಾಗಿರುತ್ತಾರೆ. ಅಂತೆಯೇ ಆಸಕ್ತ ಸದಸ್ಯರು ಜಿಲ್ಲಾ ಕೇಂದ್ರಗಳಲ್ಲಿ ಪತ್ರಿಕೆ ಮತ್ತು ಅದರ ಸಂಬಂಧಿತ ಅಂಗಸಂಸ್ಥೆಗಳ ಕಾರ್ಯಕ್ರಮದ ಮೇಲ್ವಿಚಾರಕರಾಗಬಹುದು.

**ವಾರ್ಷಿಕ ಚಂದಾ : ರೂ.130/– ; ಆಜೀವ ಸದಸ್ಯತ್ವ : ರೂ.1000/–**
**ಮುದ್ರಣ ನಿಧಿ ಸಹಾಯ ಧನ : ರೂ.3,500 ; (ಪೋಷಕ) ರೂ.5,000/– (ಮಹಾಪೋಷಕ)**

ಪತ್ರಿಕೆಯ ಬಳಗದವರಾಗಿ ಜಿಲ್ಲಾ ಕೇಂದ್ರಗಳಲ್ಲಿ ಈಗಾಗಲೇ ಮೇಲ್ವಿಚಾರಣೆಯನ್ನು ನಿರ್ವಹಿಸುವವರ ಹೆಸರುಗಳು ಕೆಳಗಿನಂತಿವೆ. ಆಸಕ್ತ ಓದುಗ, ಕಲಾವಿದರು ಕೆಳಕಂಡವರನ್ನು ಸಂಪರ್ಕಿಸಿ ಪತ್ರಿಕೆಯ ಚಂದಾದಾರರಾಗಬಹುದು ; ಮುದ್ರಣ ನಿಧಿಗೆ ಸಹಕರಿಸಬಹುದು ; ಪತ್ರಿಕೆ ಮತ್ತು ಸಂಶೋಧನಾ ಅಸೋಸಿಯೇಷನ್‌ನ ಕಾರ್ಯಕ್ರಮಗಳ ಪ್ರಾಯೋಜಕತ್ವ ವಹಿಸಿಕೊಳ್ಳಬಹುದು ; ಹೆಸರು ನೋಂದಾಯಿಸಿ ಬಳಗದವರಾಗಬಹುದು.

**ವಿಷ್ಣುಪ್ರಸಾದ್ ನಿಡ್ಡಾಜೆ,** ಪ್ರಸರಣಾಧಿಕಾರಿ ( ಮೊಬೈಲ್ : 94817 65544)
**ಎನ್. ರಾಮಭಟ್,** ಉಡುಪಿ (ಮೊಬೈಲ್ : 94499 37170 )
**ದೀಪಕ್ ಕುಮಾರ್,** ಪುತ್ತೂರು, ದಕ್ಷಿಣ ಕನ್ನಡ ( ಮೊಬೈಲ್ : 99640 23548)
**ಬಿ.ಜಿ. ನಾರಾಯಣ ಭಟ್,** ಮಡಿಕೇರಿ ( ಫೋನ್ : 08272–222709)

---

**ನೃತ್ಯ ಸಂಶೋಧಕರ ಒಕ್ಕೂಟಕ್ಕೆ ಸದಸ್ಯರಾಗಲು ಇಚ್ಛಿಸುವವರು ದೂರವಾಣಿ ಸಂಖ್ಯೆ :**
**99641 40927** ಸಂಪರ್ಕಿಸಿ.

**ವೆಬ್‌ಸೈಟ್ : www.noopurabhramari.com**
**ಸದಸ್ಯ ಧನ (ಮೂರು ವರ್ಷಕ್ಕೆ) ರೂ.1,500–00**
**ಆಜೀವ ಸದಸ್ಯತ್ವ : ರೂ.5,000–00**

**ದಾನಿಗಳಿಂದ ದೇಣಿಗೆಗಳನ್ನು ಸ್ವೀಕರಿಸಲಾಗುವುದು.**
**ನೃತ್ಯ ಸಂಶೋಧನಾ ಸಮ್ಮೇಳನಕ್ಕೆ ದೇಣಿಗೆಗಳನ್ನಿತ್ತು ಪ್ರೋತ್ಸಾಹಿಸಿ.**

ಸಂಚಿಕೆಗಳಿಗೆ ಅನುದಾನವಿತ್ತವರು

# ಭಾರತೀಯ ಭಾಷಾ ಸಂಸ್ಥಾನ

## ಮಾನಸ ಗಂಗೋತ್ರಿ,

## ಮೈಸೂರು

Published with Financial Assistance from
the Central Institute of Indian Languages

(Ministry of Human Resource Development,
Department of Higher Education, Govt of India)

**Manasagangothri, Mysore-570006**

**Vide Sanction letter 53-4(1)/2011-12/Kan/LM/GRNT
dated Jan. 20, 2012 under the scheme of Grant-in-Aid**

WE ARE A CIRCLE WITH NO BEGINNING AND NEVER ENDING